ಜನಮನದ ದನಿ


# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

26 ಜೂನ್, 2026 ಶುಕ್ರವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 107 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629




ಹಡಗು ನಿರ್ಮಾಣ, ಆರೋಗ್ಯ, ಮೂಲಸೌಕರ್ಯ ಮತ್ತು ರಕ್ಷಣಾ ಕ್ಷೇತ್ರಗಳಲ್ಲಿ ಭಾರತ ಮತ್ತು ದಕ್ಷಿಣ ಕೊರಿಯಾ ದೇಶಗಳು ಹೆಚ್ಚು ಸಹಕಾರದಿಂದ ಕೆಲಸ ಮಾಡಬೇಕೆಂದು ಭಾರತದ ವಿದೇಶಾಂಗ ಸಚಿವ ಜೈಶಂಕರ್ ಗುರುವಾರ ಅಭಿಪ್ರಾಯಪಟ್ಟರು.

ಜೂ.26ಕ್ಕೆ ಬಲರಾಮನ ದಿನಗಳು ಚಿತ್ರ ತೆರೆಗೆ » 2


ಭೂ ಸ್ವಾಧೀನ : ಹೆಚ್ಚಿನ ಪರಿಹಾರಕ್ಕೆ ಆಗ್ರಹ » 3


72 ಸಾವಿರ ಹುದ್ದೆ ಭರ್ತಿಗೆ ಸರ್ಕಾರ ಆದೇಶ » 4


# ರೈತರ ಹಿತರಕ್ಷಣೆಗೆ ಮೂರು ರಾಜ್ಯಗಳು ಬದ್ಧ

• ಪ್ರಜೋದಯ ವರದಿ

**ಬೆಂಗಳೂರು:** ತುಂಗಭದ್ರಾ ನದಿ ಪಾತ್ರದ ರೈತರ ಹಿತರಕ್ಷಣೆಗೆ ಮೂರು ರಾಜ್ಯಗಳು (ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣ) ಒಮ್ಮತದ ಐತಿಹಾಸಿಕ ತೀರ್ಮಾನ ಕೈಗೊಂಡಿವೆ. ಜಲಾಶಯದ ಹೂಳು ತೆರವು, ಸಮಾನಾಂತರ ಜಲಾಶಯ ನಿರ್ಮಾಣ ಸೇರಿ ಹಲವು ವಿಚಾರಗಳ ಕುರಿತು ಚರ್ಚೆ ನಡೆಸಿದ್ದೇವೆಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ಕೊಪ್ಪಳ ಜಿಲ್ಲೆಯ ತುಂಗಭದ್ರಾ ಜಲಾಶಯದ ನೂತನ 33 ಸ್ಪಿಲ್ ವೇ ಗೇಟ್‌ಗಳ ಲೋಕಾರ್ಪಣೆಯಲ್ಲಿ ಮಾತನಾಡಿದ ಅವರು, ರೈತ ಸಂಘಟನೆಗಳು ನೀಡಿರುವ ಅರ್ಜಿಗಳನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ನವಲಿ ಜಲಾಶಯ ನಿರ್ಮಾಣ ಅಥವಾ ಜಲಾಶಯದಲ್ಲಿ ಶೇಖರಣೆಯಾಗಿರುವ ಹೂಳು ತೆಗೆದು ನೀರನ್ನು ಸಂರಕ್ಷಿಸುವ ವಿಚಾರಗಳ ಬಗ್ಗೆ ಒಂದು ತಾಸು ಸುದೀರ್ಘವಾಗಿ ಚರ್ಚೆ ನಡೆಸಲಾಗಿದೆ. ರೈತರ ಹಿತ ಕಾಯಲು ಮತ್ತು ಅವರ ರಕ್ಷಣೆ ಮಾಡಲು ನಾವೆಲ್ಲರೂ ಸೇರಿ ಒಮ್ಮತದ ಅಭಿಪ್ರಾಯಕ್ಕೆ ಬಂದಿದ್ದೇವೆ. ಈ ಸಭೆಯಲ್ಲಿ ಕೈಗೊಳ್ಳಲಾದ ಅಂತಿಮ ನಿರ್ಧಾರಗಳನ್ನು ಕೇಂದ್ರ ಸಚಿವರು ಅಧಿಕೃತವಾಗಿ ತಿಳಿಸಲಿದ್ದಾರೆಂದರು.

ದೇಶದ ಒಕ್ಕೂಟ ವ್ಯವಸ್ಥೆಯಲ್ಲಿ ಸಂವಿಧಾನವನ್ನು ಎತ್ತಿಹಿಡಿಯಲು, ನಮ್ಮ ಹಕ್ಕುಗಳನ್ನು ರಕ್ಷಿಸಲು ಹಾಗು ರೈತರನ್ನು ಬದುಕಿಸಲು ನಮ್ಮ ನೀರು ನಮ್ಮ ಹಕ್ಕು ಎಂಬ ಘೋಷಣೆಯಡಿ ಮೂರು ರಾಜ್ಯಗಳ ರೈತರ ಹಿತ ಕಾಯುವ ನಿಟ್ಟಿನಲ್ಲಿ ಈ ತೀರ್ಮಾನಕ್ಕೆ ಬರಲಾಗಿದೆ ಎಂದರು.

**ಜಲಾಶಯಗಳಲ್ಲಿ ಹೂಳೆತ್ತಲು ಯೋಜನೆ**

ಕರ್ನಾಟಕ, ಆಂಧ್ರ ಹಾಗು ತೆಲಂಗಾಣ ರಾಜ್ಯಗಳ ಮುಖ್ಯ

» ನಾಲ್ಕನೇ ಪುಟದಲ್ಲಿ

## ಸಮಾನಾಂತರ ಜಲಾಶಯ ನಿರ್ಮಾಣ : ಡಿ.ಕೆ.ಶಿವಕುಮಾರ್




**"ನಮಗೆ ಕೇವಲ ರಾಜಕೀಯದ ಪಂಚಾಯಿತಿ ಬೇಡ, ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಬೇಕು. ರೈತರ ಆಕಾಂಕ್ಷೆಗಳನ್ನು ಈಡೇರಿಸಲು ತೆಲಂಗಾಣ ಸರ್ಕಾರ ಬದ್ಧ. ಕೃಷ್ಣಾ, ಗೋದಾವರಿ ಹಾಗು ತುಂಗಭದ್ರಾ ನದಿ ನೀರು ಹಂಚಿಕೆಗೆ ಸಂಬಂಧಿಸಿದ ಅಂತಾರಾಜ್ಯ ಜಲ ವಿವಾದಗಳಿಗೆ ಶಾಶ್ವತ ಪರಿಹಾರ ಒದಗಿಸಬೇಕು.**
**-ಎ.ರೇವಂತ್ ರೆಡ್ಡಿ , ತೆಲಂಗಾಣ ಸಿ.ಎಂ.**

### ಗೋದಾವರಿ-ಕಾವೇರಿ ಜೋಡಣೆಗೆ ಒತ್ತಾಯ

ಕೇಂದ್ರ ಸರ್ಕಾರವು ಈಗಾಗಲೇ ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶದ ನಡುವಿನ ಕೆನ್-ಬೆತ್ವಾ ಯೋಜನೆ, ರಾಜಸ್ಥಾನ ಮತ್ತು ಮಧ್ಯಪ್ರದೇಶದ ನಡುವಿನ ಪಾರ್ವತಿ-ಕಾಳಿಸಿಂಧು-ಚಂಬಲ್ ನದಿ ಜೋಡಣೆ ಯೋಜನೆಗಳನ್ನು ಯಶಸ್ವಿಯಾಗಿ ಕೈಗೆತ್ತಿಕೊಂಡಿದೆ. ಇದೇ ಮಾದರಿಯಲ್ಲಿ ದಕ್ಷಿಣ ಭಾರತದ ಪ್ರಮುಖ ನದಿಗಳಾದ ಗೋದಾವರಿ ಮತ್ತು ಕಾವೇರಿ ನದಿಗಳ ಜೋಡಣೆ ಯೋಜನೆಯನ್ನು ಕೇಂದ್ರ ಸರ್ಕಾರವು ರಾಷ್ಟ್ರೀಯ ಯೋಜನೆಯಾಗಿ ಪರಿಗಣಿಸಿ ಅನುಷ್ಠಾನಕ್ಕೆ ತರಬೇಕೆಂದು ಆಂಧ್ರ ಪ್ರದೇಶ ಮುಖ್ಯ ಮಂತ್ರಿ ಚಂದ್ರಬಾಬು ನಾಯ್ಡು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರು. ದೇಶದ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ನದಿಗಳ ಜೋಡಣೆ ಅತ್ಯಂತ ತುರ್ತಾಗಿ ಆಗಬೇಕಿದೆ. ನದಿ ಜೋಡಣೆ ಪ್ರಕ್ರಿಯೆಯಲ್ಲಿ ಯಾವುದೇ ರಾಜ್ಯಕ್ಕೆ ಅನ್ಯಾಯವಾಗಬಾರದು. ಈ ಯೋಜನೆಯನ್ನು ಜಾರಿಗೊಳಿಸುವಾಗ ಕರ್ನಾಟಕ, ಆಂಧ್ರಪ್ರದೇಶ ಹಾಗು ತೆಲಂಗಾಣ ರಾಜ್ಯಗಳ ಹಕ್ಕುಗಳನ್ನು ಸಂಪೂರ್ಣವಾಗಿ ರಕ್ಷಿಸಬೇಕೆಂದು ಒತ್ತಿ ಹೇಳಿದರು.

# ಕೃಷ್ಣಬೈರೇಗೌಡಗೆ ತಾತ್ಕಾಲಿಕ ಉಸ್ತುವಾರಿ


## ತುರ್ತು ಪ್ರಕೃತಿ ವಿಕೋಪ ಮೇಲುಸ್ತುವಾರಿ ನಿರ್ವಹಣೆ ಜವಾಬ್ದಾರಿ

• ಪ್ರಜೋದಯ ವರದಿ

**ಬೆಂಗಳೂರು:** ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಚಿವರಿಗೆ ಮಳೆಗಾಲದ ತುರ್ತು ಪರಿಸ್ಥಿತಿ ಮತ್ತು ಪ್ರವಾಹ ನಿರ್ವಹಣೆಗಾಗಿ ತಾತ್ಕಾಲಿಕ ಜಿಲ್ಲಾ ಉಸ್ತುವಾರಿ ಜವಾಬ್ದಾರಿ ಹಂಚಿಕೆ ಮಾಡಿ, ಹಾಸನ ಜಿಲ್ಲೆಯ ಜವಾಬ್ದಾರಿಯನ್ನು ಕೃಷ್ಣಬೈರೇಗೌಡ ಅವರಿಗೆ ವಹಿಸಿದ್ದಾರೆ.

ರಾಜ್ಯದ ಆಡಳಿತ ವ್ಯವಸ್ಥೆಯನ್ನು ಚುರುಕುಗೊಳಿಸುವ ಹಾಗು ಜಿಲ್ಲಾ ಮಟ್ಟದ ಅಭಿವೃದ್ಧಿ ಕಾಮಗಾರಿಗಳಿಗೆ ವೇಗ ನೀಡುವ ನಿಟ್ಟಿನಲ್ಲಿ ಮತ್ತು ಪ್ರಮುಖವಾಗಿ ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಜಿಲ್ಲಾಡಳಿತದೊಂದಿಗೆ ಸಮನ್ವಯ ಸಾಧಿಸಲು ಕ್ರಮ ಕೈಗೊಂಡಿದ್ದಾರೆ.

ರಾಜ್ಯದಲ್ಲಿ ಮುಂಗಾರು ಕೊರತೆಯಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಹಿನ್ನಲೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಮತ್ತು ಪರಿಹಾರ ಕಾಮಗಾರಿಗಳ ಉಸ್ತುವಾರಿ ವಹಿಸಲು ಮುಖ್ಯಮಂತ್ರಿ ಸಚಿವರಿಗೆ ವಿವಿಧ ಜಿಲ್ಲೆಗಳ ತುರ್ತು ಪ್ರಕೃತಿ ವಿಕೋಪ ಮೇಲುಸ್ತುವಾರಿ ಜವಾಬ್ದಾರಿಯನ್ನು ಹಂಚಿಕೆ ಮಾಡಿ ಆದೇಶಿಸಿದ್ದಾರೆ. ಇದು ಪ್ರಕೃತಿ ವಿಕೋಪ ಪರಿಹಾರ ಕಾರ್ಯಗಳ ಸಮನ್ವಯಕ್ಕಾಗಿ ಮಾತ್ರವಾಗಿದ್ದು, ಪೂರ್ಣ ಪ್ರಮಾಣದ ಉಸ್ತುವಾರಿ ಪಟ್ಟಿ ಶೀಘ್ರದಲ್ಲೇ ಪ್ರಕಟವಾಗಲಿದೆ ಎಂದು ಹೇಳಲಾಗಿದೆ.



ಉಪಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್ ಅವರಿಗೆ ತುಮಕೂರು ಮತ್ತು ಚಿತ್ರದುರ್ಗ, ಸಚಿವ ಕೃಷ್ಣ ಬೈರೇಗೌಡ ಅವರಿಗೆ ಬೆಂಗಳೂರು ನಗರ ಮತ್ತು ಹಾಸನ, ರಾಮಲಿಂಗಾ ರೆಡ್ಡಿ ಅವರಿಗೆ ಬೆಂಗಳೂರು ದಕ್ಷಿಣ ಮತ್ತು ಮಂಡ್ಯ, ಕೆ.ಹೆಚ್. ಮುನಿಯಪ್ಪ ಅವರಿಗೆ ಬೆಂಗಳೂರು ಗ್ರಾಮಾಂತರ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಉಸ್ತುವಾರಿ ನೀಡಲಾಗಿದೆ.

ಡಾ.ಯತೀಂದ್ರ ಸಿದ್ದರಾಮಯ್ಯಗೆ ಮೈಸೂರು-ಚಾಮರಾಜನಗರ, ಯು.ಟಿ.ಖಾದರ್‌ಗೆ ದಕ್ಷಿಣ ಕನ್ನಡ-ಉತ್ತರ ಕನ್ನಡ ಮತ್ತು ಉಡುಪಿ, ಎಂ.ಬಿ.ಪಾಟೀಲ್‌ಗೆ ವಿಜಯಪುರ-ಬಾಗಲಕೋಟೆ, ಪ್ರಿಯಾಂಕ್ ಖರ್ಗೆಗೆ ಕಲಬುರಗಿ-ಯಾದಗಿರಿ ಜಿಲ್ಲೆಗಳ ಉಸ್ತುವಾರಿ ನೀಡಲಾಗಿದೆ. ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ಬೆಳಗಾವಿ, ಧಾರವಾಡ ಮತ್ತು ಹಾವೇರಿ, ಕೆ.ಜೆ.ಜಾರ್ಜ್‌ಗೆ ಚಿಕ್ಕಮಗಳೂರು-ದಾವಣಗೆರೆ, ಈಶ್ವರ ಖಂಡ್ರೆಗೆ ಬೀದರ್ -ಗದಗ, ಭೈರತಿ ಸುರೇಶ್‌ಗೆಕೋಲಾರ-ಚಿಕ್ಕಬಳ್ಳಾಪುರ, ಡಾ.ಶರಣಪ್ರಕಾಶ್ ಪಾಟೀಲ್‌ಗೆ ರಾಯಚೂರು-ಕೊಪ್ಪಳ ಜಿಲ್ಲೆಗಳ ಉಸ್ತುವಾರಿ ನೀಡಲಾಗಿದೆ.

# ಅನುಮಾನದಿಂದ ಹೆಂಡತಿ ಕೊಂದ ಪತಿ

• ಪ್ರಜೋದಯ ವರದಿ

**ಹಾಸನ:** ಪತ್ನಿಯ ಶೀಲ ಶಂಕಿಸಿ ಪತಿಯೇ ನೇಣು ಬಿಗಿದು ಕೊಲೆ ಮಾಡಿರುವ ಘಟನೆ ಬೇಲೂರು ತಾಲ್ಲೂಕು ಹುಲ್ಲೇನಹಳ್ಳಿಯಲ್ಲಿ ನಡೆದಿದೆ.

ಮಾದಿಹಳ್ಳಿ ಗ್ರಾಮದ ಗೌರಮ್ಮ ಎಂಬುವವರ ಪುತ್ರಿ ಯಶೋಧ (23) ಮೃತ ದುರ್ದೈವಿ. ಪುನೀತ್ ಕೊಲೆ ಹಾಗು ಯಶೋಧ ಪ್ರೀತಿಸಿ ಏಳು ವರ್ಷಗಳ ಹಿಂದೆ ಮದುವೆಯಾಗಿದ್ದು, ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಆರಂಭದಲ್ಲೇ ಚೆನ್ನಾಗಿಯೇ ಇದ್ದ ಗಂಡ-ಹೆಂಡತಿ ನಡುವೆ ಒಂದು ವರ್ಷದಿಂದ ಬಿರುಕು ಉಂಟಾಗಿತ್ತು.

ಯಶೋಧ ಅವರು ಮೊಬೈಲ್‌ನಲ್ಲಿ ಯಾರ ಜೊತೆಗಾದರೂ ಮಾತನಾಡುತ್ತಿದ್ದರೆ ಸಂಶಯದಿಂದ ಪುನೀತ್ ಗಲಾಟೆ ಮಾಡುತ್ತಿದ್ದ. ಆತ ನೀಡುತ್ತಿದ್ದ ಮಾನಸಿಕ ಕಿರುಕುಳಕ್ಕೆ ಬೇಸತ್ತಿದ್ದ ಮಹಿಳೆ ಎರಡು ತಿಂಗಳ ಹಿಂದೆ ಸೀಮೆ ಎಣ್ಣೆ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ತಕ್ಷಣ ಹಿಮ್ಸ್ ಆಸ್ಪತ್ರೆಗೆ ದಾಖಲಿಸಿದ್ದರಿಂದ ಬದುಕುಳಿದಿದ್ದರು. ಆ ಬಳಿಕ ಎರಡೂ ಕಡೆಯ ಕುಟುಂಬ ಸದಸ್ಯರು ರಾಜಿ ಸಂಧಾನ ಮಾಡಿ ಒಟ್ಟಿಗೆ ಇರುವಂತೆ ಸೂಚಿಸಿದ್ದರು. ಯಶೋಧ ಹಾಸನದ ಹಿಮತ್ ಸಿಂಗ್ ಕಾ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡಿಕೊಂಡಿದ್ದರು.



ಬುಧವಾರ ಸಂಜೆ 4 ಗಂಟೆಗೆ ಯಶೋಧ ಮನೆಯಲ್ಲಿದ್ದಾಗ ಬಂದ ಪುನೀತ್ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ಗಲಾಟೆ ಮಾಡುತ್ತಿದ್ದ. ಪುತ್ರಿ ಪುಣ್ಯ ಎದುರೇ ಯಶೋಧ ಕುತ್ತಿಗೆಗೆ ಹಗ್ಗದಿಂದ ಬಿಗಿದು ಕೊಲೆ ಮಾಡಿದ್ದ. ಅದನ್ನು ಕಂಡ ಪುತ್ರಿ ಜೋರಾಗಿ ಅಳುತ್ತಿದ್ದಂತೆ ಮನೆ ಬಾಗಿಲು ಹಾಕಿಕೊಂಡು ಆಕೆಯನ್ನು ಅಂಗಡಿಗೆ ಕರೆದುಕೊಂಡು ಹೋಗಿದ್ದ. ಸಂಜೆ 6ರ ವೇಳೆಗೆ ಪತ್ನಿ ಯಶೋಧ ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ಸಂಬಂಧಿಕರಿಗೆ ಸುಳ್ಳು ಹೇಳಿದ್ದ. ಯಶೋಧ ಅವರ ಸಂಬಂಧಿಕರು ಬಂದು ನೋಡಿದಾಗ ಕುತ್ತಿಗೆ ಭಾಗದಲ್ಲಿ ಗಾಯದ ಗುರುತು ಕಂಡು ಬಂದಿದೆ. ಮಗಳು ಸಹ ನಡೆದ ವಿಚಾರವನ್ನು ಹೇಳಿದ್ದಾಳೆ. ಹಳೇಬೀಡು ಠಾಣೆ ಪೊಲೀಸರು ಮೃತದೇಹವನ್ನು ಹಿಮ್ಸ್‌ಗೆ ರವಾನಿಸಿದರು.

# ಜಿಲ್ಲೆಯಲ್ಲಿ ಮುಂಗಾರು ಕ್ಷೀಣ: ಪರ್ಯಾಯ ಬೆಳೆ ಅನಿವಾರ್ಯ

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

**ಹಾಸನ :** ಜಿಲ್ಲೆಯಲ್ಲಿ ಮುಂಗಾರು ಮಳೆ ನಿರೀಕ್ಷಿತ ಪ್ರಮಾಣದಲ್ಲಿ ಸುರಿಯದಿರುವ ಲಕ್ಷಣಗಳು ಕಂಡು ಬಂದಿದ್ದು, ರೈತರು ಸಾಂಪ್ರದಾಯಿಕ ಬೆಳೆ ಪದ್ಧತಿಯನ್ನು ಬದಿಗಿಟ್ಟು ಪರಿಸ್ಥಿತಿಗೆ ಅನುಗುಣವಾದ ಪರ್ಯಾಯ ಬೆಳೆಗಳತ್ತ ಮುಖ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ.

ಜಿಲ್ಲೆಯಲ್ಲಿ ಸಾಮಾನ್ಯವಾಗಿ ಜೂನ್ ಮೊದಲ ವಾರದಿಂದಲೇ ಕೃಷಿ ಚಟುವಟಿಕೆಗಳು ಚುರುಕುಗೊಳ್ಳುತ್ತಿದ್ದವು. ಆದರೆ, ಈ ಬಾರಿ ಮಳೆಯ ಕೊರತೆಯಿಂದ ರೈತರು ಬಿತ್ತನೆ ಕಾರ್ಯ ಆರಂಭಿಸಲು ಸಾಧ್ಯವಾಗಿಲ್ಲ. ಕೆಲವು ಪ್ರದೇಶಗಳಲ್ಲಿ ಆರಂಭಿಕ ಮಳೆಯಾದರೂ, ನಂತರ ಮಳೆ ಆಗದಿರುವುದು ಆತಂಕಕ್ಕೆ ಕಾರಣವಾಗಿದೆ.

ಹವಮಾನ ತಜ್ಞರ ಪ್ರಕಾರ ಈ ಬಾರಿ ಮುಂಗಾರು ಮಧ್ಯಂತರದಲ್ಲಿ ದೀರ್ಘ ವಿರಾಮ ಪಡೆಯುವ ಸಾಧ್ಯತೆ ಇದೆ. ಒಂದು ಬಾರಿ ಮಳೆಯಾದರೆ 25 ರಿಂದ 30 ದಿನಗಳವರೆಗೆ ಮಳೆಯಾಗದಿರುವ ಪರಿಸ್ಥಿತಿ ಈಗಾಗಲೇ ಎದುರಾಗಿದೆ. ಹೀಗಾಗಿ ಮಣ್ಣಿನಲ್ಲಿರುವ ತೇವಾಂಶ ಕ್ಷೀಣಿಸಿ, ಬಿತ್ತನೆ ಮಾಡಿದ ಬೆಳೆಗಳು ಒಣಗುವ ಅಪಾಯ ಎದುರಾಗಿದೆ. ಜಿಲ್ಲೆಯ ಬಹುತೇಕ ರೈತರು ಇನ್ನೂ ಮಳೆಯಾಶ್ರಿತ ಕೃಷಿಯನ್ನೇ ಅವಲಂಬಿಸಿರುವುದರಿಂದ ಹವಾಮಾನ ವೈಪರೀತ್ಯದ ಪರಿಣಾಮ ನೇರವಾಗಿ ಕೃಷಿ ಉತ್ಪಾದನೆಯ ಮೇಲೆ ಬೀಳಲಿದೆ.

**ಯಾವಾಗ ಮಳೆ ಬಂದರೆ ಯಾವ ಬೆಳೆ**

ಜುಲೈ ತಿಂಗಳಲ್ಲಿ ಮಳೆ ಆರಂಭವಾದರೆ ಮಧ್ಯಮ ಮತ್ತು ಆಳವಾದ ಕಪ್ಪು ಮಣ್ಣಿನ ಪ್ರದೇಶಗಳಲ್ಲಿ ಶೇಂಗಾ, ಎಳ್ಳು, ತೊಗರಿ, ಹುರುಳಿ, ಸಜ್ಜೆ, ನವಣೆ, ಮೆಣಸಿನಕಾಯಿ, ಸೌತೆಕಾಯಿ, ಹಿರೇಕಾಯಿ ಹಾಗು ಮೇವಿನ ಬೆಳೆಗಳನ್ನು ಬೆಳೆಯುವುದು ಸೂಕ್ತವಾಗಿದೆ.

**ಕಡಿಮೆ ಆಳದ ಕಪ್ಪು ಮತ್ತು ಕೆಂಪು** ಮಣ್ಣಿನ ಪ್ರದೇಶಗಳಲ್ಲಿ ಶೇಂಗಾ, ಎಳ್ಳು, ತೊಗರಿ, ನವಣೆ, ಸೌತೆಕಾಯಿ, ಹಿರೇಕಾಯಿ ಹಾಗು ಮೇವಿನ ಬೆಳೆಗಳನ್ನು ಬೆಳೆಯಬಹುದಾಗಿದೆ.

ಒಂದು ವೇಳೆ ಆಗಸ್ಟ್ ತಿಂಗಳವರೆಗೂ ಮುಂಗಾರು ವಿಳಂಬ ವಾದರೆ ಕಪ್ಪು ಮಣ್ಣಿನ ಪ್ರದೇಶಗಳಲ್ಲಿ ಸೂರ್ಯಕಾಂತಿ, ಎಳ್ಳು, ಸಜ್ಜೆ, ನವಣೆ, ಹುರುಳಿ ಮತ್ತು ಮೇವಿನ ಬೆಳೆಗಳು ಸೂಕ್ತವಾಗಲಿವೆ. ಕಡಿಮೆ ಆಳದ ಕಪ್ಪು ಮತ್ತು ಕೆಂಪು ಮಣ್ಣಿನ ಪ್ರದೇಶಗಳಲ್ಲಿ ಸಜ್ಜೆ, ನವಣೆ, ಎಳ್ಳು, ಹುರುಳಿ ಬೆಳೆಯಲು ಕೃಷಿ ತಜ್ಞರು ರೈತರಿಗೆ ಸಲಹೆ ನೀಡಿದ್ದಾರೆ.

**ತೇವಾಂಶ ಉಳಿಸಿಕೊಳ್ಳುವುದು ಮುಖ್ಯ**

ಮಳೆ ಕೊರತೆಯ ಸಂದರ್ಭಗಳಲ್ಲಿ ಮಣ್ಣಿನ ತೇವಾಂಶ ಸಂರಕ್ಷಣೆ ಅತ್ಯಂತ ಮುಖ್ಯ. ಕಳೆ ನಿಯಂತ್ರಣ, ಮಣ್ಣಿನ ಸವೆತ ತಡೆ, ಸಾವಯವ ಗೊಬ್ಬರ

» ನಾಲ್ಕನೇ ಪುಟದಲ್ಲಿ

- ಸಾಂಪ್ರದಾಯಿಕ ಬೆಳೆ ಬದಿಗಿಡುವ ಪರಿಸ್ಥಿತಿ ನಿರ್ಮಾಣ
- ಕೃಷಿಯಲ್ಲಿ ತಾಂತ್ರಿಕತೆ ಅಳವಡಿಸಿಕೊಳ್ಳುವುದು ಅಗತ್ಯ



**"ರಾಜ್ಯದಲ್ಲಿ ಈ ಬಾರಿ ಒಟ್ಟಾರೆ ಮುಂಗಾರು ಶೇ.60 ರಷ್ಟು ಮಾತ್ರ ಆಗಲಿದೆ. ಜಿಲ್ಲೆಯಲ್ಲಿ ಆಗಸ್ಟ್ ತಿಂಗಳಿನಿಂದ ಮತ್ತಷ್ಟು ಮಳೆ ಕಡಿಮೆ ಯಾಗುವ ಸಾಧ್ಯತೆ ಇದೆ ಎಂದು ಹವಮಾನ ತಜ್ಞರು ತಿಳಿಸಿರುವುದರಿಂದ ನೀರು ಕಡಿಮೆ ಬಳಕೆಯಾಗುವ ಬೆಳೆಗಳನ್ನು ರೈತರು ಬೆಳೆಯುವ ಜೊತೆಗೆ ಬೆಳೆ ವಿಮೆ ಮಾಡಿಸಿಕೊಳ್ಳಬೇಕು.**
**-ರಮೇಶ್ ಕುಮಾರ್, ಜಂಟಿ ಕೃಷಿ ನಿರ್ದೇಶಕರು**



(ಅಧಿಸೂಚನೆಗೊಂಡಿರುವ ಬೆಳೆಗಳು)

| ತಾಲ್ಲೂಕು | ನೀರಾವರಿ | ಮಳೆಯಾಶ್ರಿತ |
|---|---|---|
| ಆಲೂರು | ಭತ್ತ | ಮುಸುಕಿನಜೋಳ |
| ಅರಕಲಗೂಡು | ಭತ್ತ | ರಾಗಿ |
| ಅರಸೀಕೆರೆ | -- | ರಾಗಿ, ಹೆಸರು |
| ಬೇಲೂರು | -- | ಮುಸುಕಿನಜೋಳ |
| ಚ.ರಾ.ಪಟ್ಟಣ | -- | ರಾಗಿ |
| ಹಾಸನ | ಜೋಳ | ಜೋಳ |
| ಹೊ.ನ.ಪುರ | ಭತ್ತ | ರಾಗಿ |
| ಸಕಲೇಶಪುರ | -- | ಭತ್ತ |

### ಮೆಕ್ಕೆ ಜೋಳದ ಬದಲು ರಾಗಿ ಬೆಳೆಯಲು ಸಲಹೆ

ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮೆಕ್ಕೆ ಜೋಳವನ್ನು ಬೆಳೆಯಲಾಗುತ್ತದೆ. ಕಳೆದ ಬಾರಿ ಬಿಳಿ ಸುಳಿ ರೋಗ ಕಾಣಿಸಿಕೊಂಡಿದ್ದರಿಂದ ಪರ್ಯಾಯ ಬೆಳೆ ಬೆಳೆಯಲು ಈಗಾಗಲೇ ಸಲಹೆ ನೀಡಲಾಗಿದೆ. ರೈತರು ರಾಗಿಯನ್ನು ಪರ್ಯಾಯ ಬೆಳೆಯಾಗಿ ಬೆಳೆಯಬೇಕು. ರಾಗಿ ಹುಲ್ಲು ಹಸುಗಳಿಗೆ ಮೇವಾಗುತ್ತದೆ ಮಾತ್ರವಲ್ಲದೇ ರಾಗಿ ಬೆಂಬಲ ಬೆಲೆ ವ್ಯಾಪ್ತಿಗೆ ಬರುವುದರಿಂದ ರೈತರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಕೃಷಿ ಅಧಿಕಾರಿಗಳು ಸಲಹೆ ನೀಡಿದ್ದಾರೆ.

# ನಾಳೆ ನಗರದಲ್ಲಿ ಕೆಂಪೇಗೌಡ ಜಯಂತಿ: ಸಕಲ ಸಿದ್ಧತೆ

• ಪ್ರಜೋದಯ ವರದಿ

**ಹಾಸನ:** ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಜೂ. 27ರ ಶನಿವಾರ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾ ಒಕ್ಕಲಿಗರ ಸಂಘದಿಂದ ನಾಡಪ್ರಭು ಕೆಂಪೇಗೌಡರ ಜಯಂತಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಎಚ್.ಎಲ್. ಮಲ್ಲೇಶಗೌಡ ಅವರು ತಿಳಿಸಿದರು.

ಸುದ್ದಿಗೋಷ್ಟಿಯಲ್ಲಿ ಗುರುವಾರ ಮಾತನಾಡಿದ ಅವರು, ಶನಿವಾರ ಬೆಳಿಗ್ಗೆ 11 ಗಂಟೆಗೆ ಹಾಸನಾಂಬ ಕಲಾಕ್ಷೇತ್ರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಅವರು ಸಮಾರಂಭ ಉದ್ಘಾಟಿಸುವರು. ಶಾಸಕ ಹೆಚ್.ಪಿ.ಸ್ವರೂಪ್ ಅಧ್ಯಕ್ಷತೆ ವಹಿಸುವರು. ಮೈಸೂರು ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ.ಎನ್.ಎಸ್. ರಂಗರಾಜು ಅವರು ಉಪನ್ಯಾಸ ನೀಡಲಿದ್ದಾರೆಂದರು.




ಜಯಂತಿ ಅಂಗವಾಗಿ ಶ್ರೀ ಶಂಭುನಾಥ ಸ್ವಾಮೀಜಿ ಅವರ ನೇತೃತ್ವದಲ್ಲಿ ಪೂರ್ವಭಾವಿ ಸಭೆ ನಡೆಸಲಾಗಿದೆ. ಅದ್ದೂರಿ, ಅರ್ಥಪೂರ್ಣ ಕಾರ್ಯಕ್ರಮಕ್ಕೆ ಎಲ್ಲಾ ಸಿದ್ಧತೆ ಮಾಡಿ ಕೊಳ್ಳಲಾಗಿದೆ. ಕೆಂಪೇಗೌಡರು ಕಟ್ಟಿದ ಬೆಂಗಳೂರು ವಿಶ್ವ ವಿಖ್ಯಾತಿಯಾಗಿದೆ. ಎಲ್ಲಾ ವರ್ಗದ ಜನರು ಅಲ್ಲಿ ನೆಲೆಸಿರುವುದು ನಮಗೆ ಅಭಿಮಾನದ ವಿಷಯವೆಂದರು.

ನಗರದಲ್ಲಿ ಕೆಂಪೇಗೌಡರ ಪ್ರತಿಮೆ ನಿರ್ಮಾಣ ಮಾಡಲು ಶಂಭುನಾಥ ಸ್ವಾಮೀಜಿ, ಶಾಸಕರು, ಒಕ್ಕಲಿಗರ ಸಂಘದ ಜಿಲ್ಲಾಧ್ಯಕ್ಷ ಜಿ.ಎಲ್. ಮುದ್ದೇಗೌಡ ಅವರ ಸಮ್ಮುಖದಲ್ಲಿ ಸಮಿತಿ ರಚಿಸಲಾಗುವುದು. ಸಮಿತಿ ಸಲಹೆಯಂತೆ ಜಾಗ ಗುರುತಿಸಿ ಮುಂದಿನ ಜಯಂತಿ ವೇಳೆಗೆ ಅನಾವರಣಕ್ಕೆ ನಿರ್ಧರಿಸಲಾಗಿದೆ ಎಂದರು.

» ನಾಲ್ಕನೇ ಪುಟದಲ್ಲಿ

## ಜುಲೈ 1 ರಿಂದ 8 ರವರೆಗೆ ಜನಸ್ಪಂದನಾ ಸಭೆ

• ಪ್ರಜೋದಯ ವರದಿ

**ಹಾಸನ :** ಹೊಳೆನರಸೀಪುರ ವಿಧಾನಸಭಾ ಕ್ಷೇತ್ರದ ಶಾಸಕ ಹೆಚ್.ಡಿ. ರೇವಣ್ಣ ಅವರು ಜುಲೈ 1 ರಿಂದ 8 ರವರೆಗೆ ದುದ್ದ ಹೋಬಳಿ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳ ಗ್ರಾಮಗಳಲ್ಲಿ ಸಾರ್ವಜನಿಕರ ಕುಂದುಕೊರತೆ ಹಾಗೂ ಜನಸ್ಪಂದನಾ ಸಭೆಯನ್ನು ನಡೆಸಲಿದ್ದಾರೆಂದು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ.



# ಗುಡ್ಡೇನಹಳ್ಳಿಯ ನಿವಾಸಿಗಳಿಗೆ ಕಲುಷಿತ ನೀರೇ ಗತಿ

• ಪ್ರಜೋದಯ ವರದಿ

**ಹಾಸನ:** ಕುಡಿಯುವ ನೀರು ಪೂರೈಸುವ ಪೈಪ್ ಒಡೆದು ಚರಂಡಿ ನೀರು ಸೇರುತ್ತಿರುವ ಪರಿಣಾಮ ಕಲುಷಿತ ನೀರನ್ನೇ ಕುಡಿಯುವ ದುಸ್ಥಿತಿ ನಗರದ ಗುಡ್ಡೇನಹಳ್ಳಿಯಲ್ಲಿ ನಿರ್ಮಾಣವಾಗಿದೆ.

ಚರಂಡಿಯಲ್ಲೇ ಕುಡಿಯುವ ನೀರಿನ ಪೈಪ್ ಅಳವಡಿಸಲಾಗಿದೆ. 34ನೇ ವಾರ್ಡ್‌ಗೆ ಸೇರುವ ಈ ಪ್ರದೇಶದಲ್ಲಿ ಸಮಸ್ಯೆ ಶುರುವಾಗಿ ವರ್ಷಗಳೇ ಕಳೆದಿದ್ದರೂ ಪಾಲಿಕೆ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಿಲ್ಲ. ಕುಡಿಯುವ ನೀರಿನ ಜೊತೆಗೆ ಕೊಳಚೆ ನೀರು ಸೇರುತ್ತಿದೆ. ನಿವಾಸಿಗಳೆಲ್ಲಾ ಕಾರ್ಮಿಕರಾಗಿದ್ದು, ಅನಿವಾರ್ಯವಾಗಿ ಆ ನೀರನ್ನೇ ಸೋಸಿ, ಕಾಯಿಸಿ ಆರಿಸಿ ಕುಡಿಯುತ್ತಿದ್ದಾರೆ. ಅನೇಕರು ಅನಾರೋಗ್ಯಕ್ಕೂ ತುತ್ತಾಗುತ್ತಿದ್ದಾರೆ.

**ಸಾಂಕ್ರಾಮಿಕ ರೋಗ ಭೀತಿ**

ಇಳಿಜಾರಿನಲ್ಲಿರುವ ಮನೆಗಳಾಗಿರುವುದರಿಂದ ಚರಂಡಿ ನೀರು ಅಷ್ಟೇ ಪೈಪ್‌ಗೆ ಸೇರುತ್ತಿದೆ. ಮನೆಯ ತ್ಯಾಜ್ಯ, ಕಸಕಡ್ಡಿಗಳೆಲ್ಲ ಪೈಪ್ ಸೇರುತ್ತಿದೆ. ಮಹಾನಗರ ಪಾಲಿಕೆಯಿಂದ ನಾಲ್ಕು ದಿನಕ್ಕೊಮ್ಮೆ ಮಾತ್ರ ನೀರು ಸರಬರಾಜು ಆಗುತ್ತಿದ್ದು, ಅದೂ ಸಂಪೂರ್ಣ ಕಲುಷಿತವಾಗಿದೆ. ಗರ್ಭಿಣಿಯರು, ಮಕ್ಕಳು ಹಾಗು ವಯಸ್ಕರು ಅಶುದ್ಧ ನೀರು ಕುಡಿದು ಅನಾರೋಗ್ಯ ಸಮಸ್ಯೆ ಎದುರಿಸುವಂತಾಗಿದೆ. ಚರಂಡಿ ಸ್ವಚ್ಛ



» ನಾಲ್ಕನೇ ಪುಟದಲ್ಲಿ

## ಜೂ.29 ರಂದು ರೈತರ ಕುಂದು ಕೊರತೆ ಸಭೆ

• ಪ್ರಜೋದಯ ವರದಿ

**ಹಾಸನ :** ತಾಲ್ಲೂಕು ಕಚೇರಿಯಲ್ಲಿ ಜೂ.29 ರಂದು ಬೆಳಿಗ್ಗೆ 11 ಗಂಟೆಗೆ ತಾಲ್ಲೂಕು ಕಚೇರಿಯಲ್ಲಿ ರೈತರ ಕುಂದು ಕೊರತೆ ಸಭೆಯನ್ನು ಆಯೋಜಿಸಲಾಗಿದೆ.

ಸದರಿ ದಿನದಂದು ಸಾರ್ವಜನಿಕರು ಖುದ್ದು ಹಾಜರಾಗಿ ತಮ್ಮ ಅಹವಾಲನ್ನು ಸಲ್ಲಿಸಬಹುದೆಂದು ತಹಶೀಲ್ದಾರ್ ತಿಳಿಸಿದ್ದು, ತಾಲ್ಲೂಕು ವ್ಯಾಪ್ತಿಯ ಎಲ್ಲಾ ರೈತ ವರ್ಗದವರಿಗೆ ಹಾಗೂ ಸಾರ್ವಜನಿಕರಿಗೆ ದೊರೆಯಬೇಕಾದ ಸೌಲಭ್ಯಗಳು ನಿಗದಿತ ಅವಧಿಯೊಳಗೆ ದೊರೆಯದಿದ್ದಾಗ ತಮ್ಮ ಅಹವಾಲನ್ನು ಸಲ್ಲಿಸಿ ಸಮಸ್ಯೆಗಳಿಗೆ ಪರಿಹರಿಸಿಕೊಳ್ಳಬೇಕು.

ನೇರವಾಗಿ ತಮ್ಮ ಅಹವಾಲನ್ನು ಸ್ವೀಕರಿಸಲು ತಾಲ್ಲೂಕು ಮಟ್ಟದ ಅಧಿಕಾರಿಗಳು ಒಂದೆಡೆ ಇರುವುದರಿಂದ ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ನೇರವಾಗಿ ತಮ್ಮ ಅಹವಾಲನ್ನು ದಾಖಲಿಸಬಹುದೆಂದು ತಿಳಿಸಿದ್ದಾರೆ.

## ನಿತ್ಯ 200 ವಿದ್ಯಾರ್ಥಿಗಳು ಹಾಜರು | ಮೂಲ ಸೌಕರ್ಯದ ಕೊರತೆ

# ಹಾಸನ ಸ್ಪರ್ಧಾ ಕುಟೀರಕ್ಕೆ ಉತ್ತಮ ಸ್ಪಂದನೆ

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳ ಅನುಕೂಲ ಕಲ್ಪಿಸುವ ಉದ್ದೇಶದಿಂದ ನಗರ ಕೇಂದ್ರ ಗ್ರಂಥಾಲಯದಲ್ಲಿ ಪ್ರಾರಂಭಿಸಿರುವ ಸ್ಪರ್ಧಾ ಕುಟೀರಕ್ಕೆ ಸಕಾರಾತ್ಮಕ ಸ್ಪಂದನೆ ವ್ಯಕ್ತವಾಗುತ್ತಿದೆ.

ಗ್ರಾಮೀಣ ಹಾಗು ನಗರ ವ್ಯಾಪ್ತಿಯ ವಿದ್ಯಾರ್ಥಿಗಳು ಕಾಲೇಜು ವ್ಯಾಸಂಗ ಮುಗಿಸಿ ಸರ್ಕಾರಿ ನೌಕರಿ ಪಡೆಯುವ ಗುರಿಯೊಂದಿಗೆ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುತ್ತಾರೆ. ಬಡ ವಿದ್ಯಾರ್ಥಿಗಳಿಗೆ ದುಬಾರಿ ಬೆಲೆಯ ಪುಸ್ತಕ ಖರೀದಿಸುವುದು ಕಷ್ಟ. ಆದ್ದರಿಂದಲೇ ಜಿಲ್ಲಾಡಳಿತ ಮುತುವರ್ಜಿ ವಹಿಸಿ ಸ್ಪರ್ಧಾ ಕುಟೀರ ಪ್ರಾರಂಭಿಸಿದೆ. ಮಂಗಳೂರು ಜಿಲ್ಲೆಯಲ್ಲಿ ಪ್ರಾರಂಭವಾದ ಈ ಪ್ರಯೋಗಕ್ಕೆ ಧನಾತ್ಮಕ ಪ್ರತಿಕ್ರಿಯೆ ವ್ಯಕ್ತವಾದ ಬಳಿಕ ಮೈಸೂರು, ಚಿತ್ರದುರ್ಗ, ಹಾಸನದಲ್ಲೂ ಪ್ರಾರಂಭಿಸಲಾಗಿದೆ.

ನಗರದ ಮಹಾವೀರ ವೃತ್ತ ಸಮೀಪದಲ್ಲಿರುವ ಜಿಲ್ಲಾ ಕೇಂದ್ರ ಗ್ರಂಥಾಲಯದಲ್ಲಿ ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳ ಅಧ್ಯಯನಕ್ಕಾಗಿಯೇ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ. ಸ್ಥಳೀಯ ಸಂಪನ್ಮೂಲ ಬಳಸಿಕೊಂಡಿರುವ ಅಧಿಕಾರಿಗಳು ಓದುಗರಿಗಾಗಿ ಟೇಬಲ್, ಕುರ್ಚಿ, ವಿದ್ಯುತ್ ಹಾಗು ಫ್ಯಾನ್ ವ್ಯವಸ್ಥೆ ಮಾಡಿದ್ದಾರೆ. ಬೆಳಿಗ್ಗೆ 8 ರಿಂದ ರಾತ್ರಿ 8 ಗಂಟೆಯವರೆಗೆ ಅಧ್ಯಯನಕ್ಕೆ ಅವಕಾಶವಿದೆ. ಭಾರೀ ಬೆಲೆಯ ಪುಸ್ತಕಗಳು ಇಲ್ಲಿ ಲಭ್ಯವಿದ್ದು, ಆಸಕ್ತರು ತಮ್ಮ ವಿಳಾಸ ದಾಖಲಾತಿ ನೀಡಿ ಪಡೆಯಬಹುದು. ಜೊತೆಗೆ ಓದುವುದಕ್ಕಾಗಿ ಮನೆಗೆ ತೆಗೆದುಕೊಂಡು ಹೋಗಲು ಬಯಸುವವರು ಪುಸ್ತಕದ ಬೆಲೆಯ ಮೂರು ಪಟ್ಟು ಹಣ ಪಾವತಿಸಬೇಕು. ಪುಸ್ತಕ ವಾಪಾಸ್ ನೀಡಿದ ಬಳಿಕ ಕಟ್ಟಿದ ಮೊತ್ತವನ್ನು ವಾಪಾಸ್ ನೀಡಲಾಗುತ್ತದೆ. ನಿತ್ಯ 200 ವಿದ್ಯಾರ್ಥಿಗಳು ಸ್ಪರ್ಧಾ ಕುಟೀರದ ಪ್ರಯೋಜನ ಪಡೆಯುತ್ತಿದ್ದಾರೆ.



**65 ವಿದ್ಯಾರ್ಥಿಗಳು ತೇರ್ಗಡೆ**

ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ಎಂದರೆ ತಪಸ್ಸಿನ ಮಾಡಿದಂತೆಯೇ ಎಂಬುದು ಸರ್ವವಿದಿತ. ಓದಿನಲ್ಲಿ ಆಸಕ್ತಿ ಇರುವ, ಸರ್ಕಾರಿ ನೌಕರಿ ಪಡೆಯಲೇಬೇಕೆಂದು ಪಣ ತೊಟ್ಟಿರುವ ಅಭ್ಯರ್ಥಿಗಳಿಗೆ ಸಾಧ್ಯವಾದಷ್ಟು ನೆರವಾಗಬೇಕೆಂದು ಯೋಜನೆ ರೂಪಿಸಿರುವ ಅಧಿಕಾರಿಗಳು ಆಸಕ್ತರಿಗೆ ಪೂರ್ವ ಸಿದ್ಧತಾ ಪರೀಕ್ಷೆಗಳನ್ನು ನಡೆಸುತ್ತಿದ್ದಾರೆ. ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಇತ್ತೀಚೆಗೆ ಪರೀಕ್ಷೆ ನಡೆಸಿದ್ದು, 65 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಅವರಿಗೆ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ, ಅತ್ಯುಪಯುಕ್ತ ಪುಸ್ತಕಗಳನ್ನು ನೀಡುವ ಕುರಿತು ಚಿಂತನೆ ನಡೆದಿದೆ. ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಕನಿಷ್ಟ 1 ಸಾವಿರ ಅಭ್ಯರ್ಥಿಗಳಿಗೆ ತರಬೇತಿ ನೀಡುವ ಉದ್ದೇಶ ಹಾಕಿಕೊಂಡಿದ್ದು, ಆ ನಿಟ್ಟಿನಲ್ಲಿ ಮೊದಲ ಪ್ರಯತ್ನ ಪ್ರಾರಂಭವಾಗಿದೆ.

**ಗ್ರಂಥಾಲಯಕ್ಕೆ ಅನುದಾನದ ಕೊರತೆ**

ನಗರ ಗ್ರಂಥಾಲಯಕ್ಕೆ ಸರ್ಕಾರದಿಂದ ನೇರವಾಗಿ ಯಾವ ಅನುದಾನವೂ ಬಾರದಿರುವುದು ಸಮಸ್ಯೆ ತಂದೊಡ್ಡಿದೆ. ಮಹಾನಗರ ಪಾಲಿಕೆ ನೀಡುವ ಹಣದಿಂದ ಮಾತ್ರ ಮೂಲಸೌಕರ್ಯ ವ್ಯವಸ್ಥೆ ಮಾಡಿಕೊಳ್ಳಬಹುದು. ನಗರ ಗ್ರಂಥಾಲಯ ಪ್ರಾಧಿಕಾರಕ್ಕೆ ಮೇಯರ್ ಅಧ್ಯಕ್ಷರಾಗಿರುತ್ತಾರೆ. ಸದ್ಯ ಮೇಯರ್ ಇಲ್ಲದೆ ಇರುವುದರಿಂದ ಆಡಳಿತಾಧಿಕಾರಿಗಳಿಂದಲೇ ಎಲ್ಲದಕ್ಕೂ ಅನುಮೋದನೆ ಪಡೆಯಬೇಕು. ಅಧಿಕಾರಿ ಮೈಸೂರಿನಲ್ಲಿರುವುದರಿಂದ ಗ್ರಂಥಾಲಯದ ಸಮಸ್ಯೆಗೆ ಪರಿಹಾರ ಇಲ್ಲವಾಗಿದೆ.

ಜೊತೆಗೆ ಗ್ರಂಥಾಲಯ ನೂತನ ಕಟ್ಟಡ ಕಾಮಗಾರಿ ಪ್ರಾರಂಭವಾಗಿ ವರ್ಷಗಳೇ ಕಳೆದಿದ್ದರೂ ಬಾಕಿ ಅನುದಾನ ಬಿಡುಗಡೆಯಾಗದ ಹಿನ್ನಲೆಯಲ್ಲಿ ಕಾಮಗಾರಿ ಅರ್ಧಕ್ಕೆ ನಿಂತಿದೆ. ಇನ್ನು 76 ಲ. ರೂ. ದೊರೆತರೆ ಉಳಿದ ಕೆಲಸ ಮಾಡಬಹುದು. ಅದಕ್ಕಾಗಿ ಗ್ರಂಥಾಲಯ ಅಧಿಕಾರಿಗಳು ಸರ್ಕಾರಕ್ಕೆ ಸರಣಿ ಪ್ರಸ್ತಾವನೆ ಸಲ್ಲಿಸುತ್ತಿದ್ದರೂ ಪ್ರಯೋಜನವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗೆ ಅಧಿಕಾರವಿಲ್ಲ. ಇನ್ನು ಸಿಎಸ್ ಆರ್ ನಿಧಿ ದೊರೆಯುತ್ತದೆಯಾದರೂ ಅದು ಸಲಕರಣೆ ಖರೀದಿಗೆ ಹೊರತು ಕಟ್ಟಡ ಕಾಮಗಾರಿ ಕೈಗೊಳ್ಳುವಂತಿಲ್ಲವೆಂಬ ನಿಯಮ ವಿದೆ. ಹೀಗಾಗಿ ಗ್ರಂಥಾಲಯದ ಕನಸು ನನಸಾಗುವ ಸಮಯ ದೂರವಾಗುತ್ತಲೇ ಇದೆ.

"ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುವವವರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ತೆರೆದಿರುವ ಸ್ಪರ್ಧಾ ಕುಟೀರಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. ಆಸಕ್ತಿಯಿಂದ ಮಕ್ಕಳು ಅಧ್ಯಯನದಲ್ಲಿ ತೊಡಗುತ್ತಿದ್ದಾರೆ.
-ಕೆ. ಹಸಿನಾ ತಾಜ್, ಉಪನಿರ್ದೇಶಕರು ಜಿಲ್ಲಾ ಗ್ರಂಥಾಲಯ

## ಜೂ.27 ರಂದು ಕೆಂಪೇಗೌಡ ಜಯಂತಿ

• ಪ್ರಜೋದಯ ವರದಿ

**ಹಾಸನ :** ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಜೂ.27 ರಂದು ಬೆಳಿಗ್ಗೆ 11 ಗಂಟೆಗೆ ನಾಡಪ್ರಭು ಶ್ರೀ ಕೆಂಪೇಗೌಡ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಅವರು ಕಾರ್ಯಕ್ರಮ ಉದ್ಘಾಟಿಸಿ, ಆಶೀರ್ವಚನ ನೀಡಲಿದ್ದಾರೆ, ರಾಜ್ಯ ಗೃಹ ಮಂಡಳಿ ಅಧ್ಯಕ್ಷ ಕೆ.ಎಂ. ಶಿವಲಿಂಗೇಗೌಡ ಅವರು ಗೌರವ ಉಪಸ್ಥಿತಿಯಲ್ಲಿ, ಶಾಸಕ ಹೆಚ್.ಪಿ. ಸ್ವರೂಪ್ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಸಂಸದ ಶ್ರೇಯಸ್, ಜಿಲ್ಲೆ ಎಲ್ಲಾ ಶಾಸಕರು, ವಿಧಾನ ಪರಿಷತ್ ಸದಸ್ಯರು ಸೇರಿ ಹಲವರು ಭಾಗವಹಿಸಲಿದ್ದಾರೆ.

ಕಾರ್ಯಕ್ರಮದ ಅಂಗವಾಗಿ ಅಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿ ಕಚೇರಿ ಆರವಣದಲ್ಲಿ ಕೆಂಪೇಗೌಡರವರ ಭಾವಚಿತ್ರಕ್ಕೆ ಪುಷ್ಪಾರ್ಚನೆಯೊಂದಿಗೆ ಮೆರವಣಿಗೆ ಚಾಲನೆ ನೀಡಲಾಗುವುದು.

C M Y K C M Y K C M Y K C M Y K

E-mail : prajodayahsn@gmail.com
ಪ್ರಜೋದಯ
26 ಜೂನ್ 2026 ಶುಕ್ರವಾರ

# ಸಿನಿ ಪ್ರಜಾ

# 26ಕ್ಕೆ ಬಲರಾಮನ ದಿನಗಳು ಚಿತ್ರ ರಾಜ್ಯಾದ್ಯಂತ ತೆರೆಗೆ




## ಬಲರಾಮನ ದಿನಗಳು ಆ ದಿನಗಳು ಸಿನಿಮಾದ ಮತ್ತೊಂದು ಅಧ್ಯಾಯ, ಮುಂದುವರೆದ ಭಾಗವಲ್ಲ: ನಿರ್ದೇಶಕ

ಆ ದಿನಗಳು, ಆಟಗಾರ, ಅಮ್ಮ ಐ ಲವ್ ಯೂ ಹೀಗೆ ಸದಭಿರುಚಿಯ ಸಿನಿಮಾಗಳನ್ನು ನಿರ್ದೇಶಿಸಿ ತನ್ನದೇ ಛಾಪು ಮೂಡಿಸಿರುವ ಡೈರೆಕ್ಟರ್ ಕೆ.ಎಂ.ಚೈತನ್ಯ, ಇದೀಗ ಬಲರಾಮನ ದಿನಗಳು ಚಿತ್ರದ ಮೂಲಕ ಮತ್ತೊಂದು ಆ ದಿನಗಳ ಅಧ್ಯಾಯ ತೋರಿಸಲು ಸಜ್ಜಾಗಿದ್ದಾರೆ.

ಈ ಸಿನಿಮಾದ ಕಥೆ ವಿನೋದ್ ಪ್ರಭಾಕರ್‌ಗೆ ಮಾಡಿದ್ದಾ?, ಆ ದಿನಗಳು ಸಿನಿಮಾಗೂ ಬಲರಾಮನ ದಿನಗಳು ಚಿತ್ರಕ್ಕೆ ಏನು ನಂಟು?, ವಿನೋದ್ ಪ್ರಭಾಕರ್ ಅನಾರೋಗ್ಯದ ಬಗ್ಗೆ ಹಬ್ಬಿದ ಗಾಸಿಪ್‌ಗಳು ಏನು?.. ಹೀಗೆ ಹಲವಾರು ವಿಚಾರಗಳ ಬಗ್ಗೆ ಈಟಿವಿ ಭಾರತದ ವಿಶೇಷ ಸಂದರ್ಶನದಲ್ಲಿ ಬರಹಗಾರ ಹಾಗೂ ನಿರ್ದೇಶಕ ಕೆ.ಎಂ.ಚೈತನ್ಯ ಹಂಚಿಕೊಂಡಿದ್ದಾರೆ.

**ಆ ದಿನಗಳು ಸಿನಿಮಾಗೂ ಬಲರಾಮನ ಸಿನಿಮಾಗೂ ಏನಾದರೂ ನಂಟಿದೆಯಾ?**

ನಾನು ಪೋಸ್ಟರ್‌ನಲ್ಲಿ ಹೇಳಿದ ಹಾಗೆ ಇದು ಆ ದಿನಗಳ ಸಿನಿಮಾದ ಮತ್ತೊಂದು ಅಧ್ಯಾಯ. ಆದರೆ ಮುಂದುವರೆದ ಭಾಗ ಅಲ್ಲ. ಆ ದಿನಗಳು ಸಿನಿಮಾ 1985ಲ್ಲಿ ಶುರುವಾಗಿ 1986ನಲ್ಲಿ ಮುಗಿಯುತ್ತೆ. ಬಲರಾಮನ ದಿನಗಳು ಸಿನಿಮಾ 1980ರಲ್ಲಿ ಶುರುವಾಗಿ 1990ರ ತನಕ ನಡೆಯುತ್ತೆ. ಆ ಒಂದು ದಶಕ ಇದೆಯಲ್ಲಾ ಅದು ಬೆಂಗಳೂರಿಗೆ, ಭಾರತಕ್ಕೆ ಇಡೀ ಪ್ರಪಂಚಕ್ಕೆ ಬಹು ಮುಖ್ಯವಾದ ದಶಕ. ಆ ದಶಕದಲ್ಲಿ ಬೆಂಗಳೂರಿನಲ್ಲಿ ನಡೆಯುವ ಕ್ರೈಂ ಸ್ಟೋರಿಗಳನ್ನು ಈ ಬಲರಾಮನ ದಿನಗಳು ಸಿನಿಮಾದಲ್ಲಿ ಹೇಳುತ್ತಿದ್ದೇವೆ.

**ಬಲರಾಮನ ದಿನಗಳು ಸಿನಿಮಾದ ಕಥೆ ವಿನೋದ್ ಪ್ರಭಾಕರ್‌ಗೆ ಮಾಡಿದ್ದಾ ಅಥವಾ ಬೇರೆ ನಟನಿಗಾ?**

ನಮ್ಮ ಸಿನಿಮಾದ ನಿರ್ಮಾಪಕ ಶ್ರೇಯಸ್ ಅವರು ಬಲರಾಮನ ಬಗ್ಗೆ ಸಿನಿಮಾ ಮಾಡಿ ಈ ಕಥೆಯನ್ನು ವಿನೋದ್ ಪ್ರಭಾಕರ್ ಅವರಿಗೆ ಮಾಡಿ ಅಂತಾ ಬಂದಿದ್ರು. ರೌಡಿಶೀಟರ್ ಬಲರಾಮ ನಮ್ಮ ನಿರ್ಮಾಪಕ ಶ್ರೇಯಸ್ ಅವರ ತಾಯಿಯ ಊರಿನವರು. ಅವರ ತಾಯಿ ನಿಜವಾದ ಬಲರಾಮನನ್ನು ನೋಡಿದ್ದಾರೆ. ಆದರೆ ಅವರು ನನ್ನ ಹತ್ತಿರ ಬಂದಾಗ ನಾನು ನಿಜವಾದ ಬಲರಾಮನ ಬಯೋಪಿಕ್ ಮಾಡೋಲ್ಲ, ನಾನು ಅವರ ಹೆಸರನ್ನು ಉಳಿಸಿಕೊಂಡು, ನಿಜ ಜೀವನದ ಘಟನೆಗಳನ್ನು ಸ್ಪೂರ್ತಿಯಾಗಿ ಇಟ್ಟುಕೊಂಡು ಸಿನಿಮಾ ಮಾಡುತ್ತೇನೆ. ನನ್ನ ಕಲ್ಪನೆಯಲ್ಲಿ ಒಳ್ಳೆ ಕಥೆ ಮಾಡುತ್ತೇನೆ ಎಂದಾಗ ಅವರು ಒಪ್ಪಿಕೊಂಡರು. ಆ ಕಾರಣಕ್ಕೆ ಬಲರಾಮನ ಸಿನಿಮಾಕ್ಕೆ ನೈಜ ಕೆಲ ಘಟನೆಗಳ ಸ್ಫೂರ್ತಿ ಇದೆ. ಇದು ನನ್ನ ಕ್ರಿಯೆಟೀವ್ ಹಾಗೂ ಸಿನಿ ಮ್ಯಾಟಿಕ್.

**ಬಹುಭಾಷಾ ನಟರಾದ ಆಶಿಷ್ ವಿದ್ಯಾರ್ಥಿ ಹಾಗೂ ಅತುಲ್ ಕುಲಕರ್ಣಿ ಅವರೊಂದಿಗೆ ಒಡನಾಟ ಹೇಗೆ?**

ಆಶಿಷ್ ಮತ್ತು ಅತುಲ್ ಕುಲಕರ್ಣಿ ಇಬ್ಬರೂ ನಾಟಕ ಹಾಗೂ ರಂಗಭೂಮಿ ಕಲಾವಿದರು. ಆ ಹಿನ್ನೆಲೆಯಿಂದ ಸಿನಿಮಾಗೆ ಬಂದವರು. ನಾನೂ ಕೂಡ ರಂಗಭೂಮಿಯಿಂದ ಸಿನಿಮಾಗೆ ಬಂದವ. ಅವರೊಂದಿಗೆ ಕೆಲಸ ಮಾಡುವಾಗ ನಾಟಕದವರ ಜತೆ ಕೆಲಸ ಮಾಡಿದ ಅನುಭವ ಇರುತ್ತದೆ. ಅವರು ಸ್ಕ್ರಿಪ್ಟ್ ಹಾಗೂ ಪಾತ್ರದಲ್ಲಿ ತೊಡಗಿಸಿಕೊಳ್ಳುವ ರೀತಿ ತುಂಬಾನೇ ಮುಖ್ಯ. ಇಂತಹ ಸ್ಟಾರ್ ನಾಟಕ ಕಲಾವಿದರು ಆ ದಿನಗಳು ಸಿನಿಮಾದಲ್ಲಿ ನನ್ನಂಥ ಹೊಸ ಕಲಾವಿದನನ್ನು ಹುಟ್ಟು ಹಾಕಿದರು. ಅವರ ಜತೆಗೆ ರಿಹರ್ಸಲ್ ಮಾಡುತ್ತಾ ಈ ಸಿನಿಮಾ ಶೂಟಿಂಗ್ ಮಾಡಿದ್ದೇವೆ. ಒಳ್ಳೆ ಅನುಭವ.

**ಬಲರಾಮನ ಪಾತ್ರಕ್ಕೆ ವಿನೋದ್ ಪ್ರಭಾಕರ್ ಅವರ ಮೇಕ್ ಓವರ್ ಅಂತಾ ಏನು ಮಾಡಿಸಿದ್ರಿ?**

ವಿನೋದ್ ಮೊದಲೇ ಫಿಟ್ ಮ್ಯಾನ್. ಬಲರಾಮನ ಪಾತ್ರಕ್ಕೆ ಬಾಡಿ ಬಿಲ್ಡ್ ಆ ರೀತಿ ಏನು ನಿರೀಕ್ಷೆ ಇರಲಿಲ್ಲ. ಆದರೆ ಆ ರೀತಿಯ ಸಿದ್ಧತೆಯನ್ನು ವಿನೋದ್ ಮಾಡಿಕೊಂಡು ಈ ಪಾತ್ರಕ್ಕೆ ತನ್ನನ್ನು ಅರ್ಪಿಸಿಕೊಂಡಿದ್ದಾರೆ. ನಾನು ಮೊದಲೇ ಹೇಳಿದ ಹಾಗೆ ವಿನೋದ್ ಪ್ರಭಾಕರ್ ಕನ್ನಡದ ಪ್ರತಿಭಾವಂತ ನಟರಲ್ಲಿ ಒಬ್ಬರು. ಯಾವುದೇ ಪಾತ್ರ ಕೊಟ್ಟರೂ ನಿಭಾಯಿಸುವ ನಟ. ಐದು ತಿಂಗಳಲ್ಲಿ ಕಂಪ್ಲೀಟ್ ವಿನೋದ್ ಪ್ರಭಾಕರ್ ಬಲರಾಮನ ಪಾತ್ರವನ್ನು ಜೀವಿಸಿದ್ದಾರೆ. ನಿಮಗೆ ಸಿನಿಮಾ ನೋಡಿದಾಗ ಗೊತ್ತಾಗುತ್ತದೆ. ಅವರೊಂದಿಗೆ ಕೆಲಸ ಮಾಡಿದ್ದು ನನ್ನ ಸೌಭಾಗ್ಯ.

**ವಿನೋದ್ ಪ್ರಭಾಕರ್ ಆರೋಗ್ಯದಲ್ಲಿ ಏರುಪೇರಾದ ವಿಚಾರವೇನು?**

ಬಲರಾಮನ ಸಿನಿಮಾದ ಪ್ರಚಾರದಲ್ಲಿ ವಿನೋದ್ ಅವರ ಭಾಗವಹಿಸುವಿಕೆ ಜಾಸ್ತಿನೇ ಇತ್ತು. ಮೈಸೂರಿಗೆ ಹೋಗಿ ಬಂದಾಗ ರಾತ್ರಿ ಎರಡು ಗಂಟೆ ಆಗಿದೆ. ಮತ್ತೆ ಮತ್ತೊಂದು ಕಡೆ ಪ್ರಮೋಷನ್‌ಗೆ ಹೋದಾಗ ಮುಂಜಾನೆ 3 ಗಂಟೆ ಆಗಿದೆ. ತುಂಬಾ ಶಿಸ್ತಿನ ಮನುಷ್ಯ ಬೆಳಗ್ಗೆ 4.30ಕ್ಕೆ ಎದ್ದೇಳುತ್ತಾರೆ. ನೀವು ರಾತ್ರಿ ಎಷ್ಟು ಗಂಟೆಗೆ ಮಲಗಿಸಿದ್ರು ಅವರು ಕರೆಕ್ಟ್ ಆಗಿ ಬೆಳಗ್ಗೆ 4.30ಕ್ಕೆ ಎದ್ದೇಳುತ್ತಾರೆ. ಅವರ ಬೆಳಗ್ಗೆ 6.30 ತಿಂಡಿ, 11.30. ಹಣ್ಣು ತರಕಾರಿ, 2.30 ಊಟ ಸಂಜೆ 7.30ಕ್ಕೆ ಊಟ. ಹೀಗೆ ಕರೆಕ್ಟ್ ಟೈಮ್‌ಗೆ ಎಲ್ಲಾ ಮುಗಿಸುವ ಶಿಸ್ತನ್ನು ಹಲವಾರು ವರ್ಷಗಳಿಂದ ಕಾಪಾಡಿಕೊಂಡು ಬಂದವರು. ಒತ್ತಡದಿಂದ ಏಕಾಏಕಿ ಆರೋಗ್ಯದಲ್ಲಿ ಸಮಸ್ಯೆ ಆದಾಗ, ಲೋ ಬಿಪಿ ಅಂದಾಗ ಎಲ್ಲರಿಗೂ ಶಾಕ್ ಆಯಿತು. ಅದರ ಬಗ್ಗೆ ಕೆಲವರು ಬೇರೆ ಬೇರೆ ರೀತಿಯ ಗಾಸಿಪ್‌ಗಳನ್ನು ಹಬ್ಬಿಸಿದ್ದರು. ಆ ರೀತಿ ಏನು ಆಗಿಲ್ಲ. ಬಿಪಿ ಲೋ ಆಗಿದ್ದು ಅಷ್ಟೇ. ಹತ್ತು ದಿನದಲ್ಲಿ ವಿನೋದ್ ಪ್ರಭಾಕರ್ ನಾಲ್ಕು ಕೆಜಿ ಕಡಿಮೆ ಆಗಿದ್ದರು. ಅವರು ಆಸ್ಪತ್ರೆಯಲ್ಲಿ ಒಂದು ದಿನ ಮಾತ್ರ ಇದ್ದರು. ಈಗ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ. ಯಾವುದೇ ತೊಂದರೆ ಇಲ್ಲ ಚೆನ್ನಾಗಿ ಇದ್ದಾರೆ ಅಂತಾ ಚೈತನ್ಯ ಹೇಳಿದರು.

**ಕೆ.ಎಂ.ಚೈತನ್ಯ ಅಂದಾಕ್ಷಣ ಫ್ಯಾಮಿಲಿ ಸೆಂಟಿಮೆಂಟ್ ಹಾಗೂ ಥ್ರಿಲ್ಲರ್ ಸಿನಿಮಾಗಳಿಗೆ ಹೆಸರುವಾಸಿ. ಅಂಡರ್ ವರ್ಲ್ಡ್ ಸಿನಿಮಾ ಮಾಡೋದಿಕ್ಕೆ ಹೇಗೆ ಸಾಧ್ಯ ಆಗುತ್ತದೆ?**

ನನಗೆ ಆ ದಿನಗಳು ಸಿನಿಮಾ ಮೂಲಕ ಅಗ್ನಿ ಶ್ರೀಧರ್ ಮೂಲಕ ಬೆಂಗಳೂರಿನ ಭೂಗತ ಲೋಕದ ಬಗ್ಗೆ ಪರಿಚಯ ಮಾಡಿಸಿಕೊಟ್ಟರು. ಆಗ ನನಗೆ ಅಂಡರ್ ವರ್ಲ್ಡ್ ಬಗ್ಗೆ ಕುತೂಹಲ ಹುಟ್ಟಿದ್ದು. ರೌಡಿಯಲ್ಲಿ ಎಮೋಷನ್ ಇರುತ್ತದೆ, ಅಂಡರ್ ವರ್ಲ್ಡ್ ಅಂದರೆ ಅಲ್ಲಿ ಮಚ್ಚು, ಲಾಂಗ್ ಇರೋದಿಲ್ಲ. ರೌಡಿಗಳಲ್ಲಿ ಪ್ರೀತಿ ಇರುತ್ತದೆ. ಇವರು ಯಾವ ಕಾರಣಕ್ಕೆ ಅಂಡರ್ ವರ್ಲ್ಡ್‌ಗೆ ಬಂದರು. ಅವರನ್ನು ಪೊಲೀಸ್ ಅಧಿಕಾರಿಗಳು, ರಾಜಕೀಯ ಮುಖಂಡರು ಹೇಗೆ ಬಳಸಿಕೊಳ್ಳುತ್ತಾರೆ. ಅವರಲ್ಲಿರುವ ನೋವಿನ, ಅವರ ಕಥೆಯನ್ನು ಮಾನವ ಆಸಕ್ತಿದಾಯಕವಾಗಿ ಹೇಳೋದಿಕ್ಕೆ ಪ್ರಯತ್ನಪಡುತ್ತೇವೆ.

**ನಿಮ್ಮ ಪ್ರಕಾರ ರೀಲ್ಸ್ ಯುಗದಲ್ಲಿ ಅತಿಯಾದ ಸಿನಿಮಾ ಪ್ರಚಾರ, ಸಿನಿಮಾ ಗೌಪ್ಯತೆ ನೋಡುಗರಲ್ಲಿ ಕಡಿಮೆ ಆಗುತ್ತಿದೆ ಅನಿಸುತ್ತಿಲ್ವಾ?**

ನಿಮ್ಮ ಮಾತು ನಿಜ. ಆದರೆ ನಾನು ಆ ದಿನಗಳು ಸಿನಿಮಾ ಮಾಡುವಾಗ ಇಷ್ಟೊಂದು ಮಲ್ಟಿಪ್ಲೆಕ್ಸ್ ಇರಲಿಲ್ಲ. ಸೋಷಿಯಲ್ ಮೀಡಿಯಾ ಇರಲಿಲ್ಲ. 18 ವರ್ಷ ಬಳಿಕ ಈಗ ಎಷ್ಟು ಮಾಲ್‌ಗಳು ಆಗಿವೆ, ಮಲ್ಟಿಪ್ಲೆಕ್ಸ್ ಸ್ಕ್ರೀನ್‌ಗಳು ಬಂದಿವೆ. ಎಷ್ಟು ಸೋಷಿಯಲ್ ಮೀಡಿಯಾಗಳು ಪ್ರಚಾರಕ್ಕೆ




ಆದರೆ ಒಂದು ಕಾಲ ಇತ್ತು ಸ್ಟಾರ್‌ಗಳನ್ನು ನೋಡುವುದಕ್ಕೆ ಆಗುತ್ತಿರಲಿಲ್ಲ. ಹಾಗೇ ಸಿನಿಮಾ ಶೂಟಿಂಗ್ ಹೇಗೆ ಆಗುತ್ತದೆ, ಯಾವ ಟೆಕ್ನಾಲಜಿ ಬಳಸುತ್ತಾರೆ ಎಂಬುದರ ಬಗ್ಗೆ ಒಂದು ಮಿಸ್ಟರಿ ಒಂದು ಸೀಕ್ರೆಟ್ಸ್ ಇತ್ತು. ಈಗ ಅತಿಯಾದ ಪ್ರಚಾರದಿಂದ ಸಿನಿಮಾದ ಸೀಕ್ರೆಟ್ ಹೋಗಿದ್ದರಿಂದ, ಸಿನಿಮಾ ನೋಡುವವರ ಸಂಖ್ಯೆ ಕಡಿಮೆ ಆಗುತ್ತಾ ಇರೋದು ಸತ್ಯ.

**ಸದ್ಯ ಚಿತ್ರರಂಗದಲ್ಲಿ ಥಿಯೇಟರ್‌ಗಳಿಗೆ ಸಿನಿಮಾ ಪ್ರೇಕ್ಷಕರು ಬರುತ್ತಿಲ್ಲವೆಂಬ ಕೂಗು ಶುರುವಾಗಿದೆ. ಏನು ಹೇಳುತ್ತೀರಾ?**

ಈ ಸಮಸ್ಯೆ ಬರೀ ಚಿತ್ರರಂಗಕ್ಕೆ ಇಲ್ಲ, ಇಡೀ ಸಮಾಜದಲ್ಲಿದೆ. ಮನೆಯಲ್ಲಿ ಒಬ್ಬರಿಗೆ ಒಬ್ಬರು ಮಾತನಾಡೋದನ್ನು ಬಿಟ್ಟು ಮೊಬೈಲ್‌ಗೆ ಕನೆಕ್ಟ್ ಆಗಿದ್ದಾರೆ. ಇವತ್ತಿನ ಜನಕ್ಕೆ ಸಿನಿಮಾ ನೋಡುವ ಬದಲು 30 ಸೆಕೆಂಡ್ ವಿಡಿಯೋ ನೋಡದರಲ್ಲಿಯೇ ಖುಷಿ ಪಡುತ್ತಾ ಇದ್ದಾರೆ. ಅದಕ್ಕೆ ಪರಿಹಾರ ಕಂಡುಕೊಳ್ಳದೆ ಚಿತ್ರಮಂದಿರಗಳಿಗೆ ಜನ ಬರ್ತಾ ಇಲ್ಲ ಅನ್ನೋದು ತಪ್ಪು. ಎಲ್ಲರು ಮೊಬೈಲ್ ಬಿಟ್ಟುರೇ ನಾಟಕ, ಸಿನಿಮಾಗಳನ್ನು ನೋಡಲು ಜನರು ಬರ್ತಾರೆ ಅಂತಾರೆ ನಿರ್ದೇಶಕ.

**ಬಲರಾಮನ ದಿನಗಳು ಸಿನಿಮಾ ಬಳಿಕ ಕೆ.ಎಂ.ಚೈತನ್ಯ ಮುಂದಿನ ಸಿನಿಮಾ ಯಾವುದು?**

ನಾನು ಈಗಾಗಲೇ ಗೆರೆಯಾ ಅಂತಾ ಸಿನಿಮಾ ಘೋಷಣೆ ಮಾಡಿದ್ದೀನಿ. ಇಮ್ಮಡಿ ಪುಲಿಕೇಶಿ ಬಗ್ಗೆ ಮಾಡುತ್ತಾ ಇದ್ದೇನೆ. ಬಾಂಬಾಯ ಸಿನಿಮಾ ನಿರ್ಮಾಣ ಸಂಸ್ಥೆ ನಿರ್ಮಾಣ ಮಾಡುತ್ತಿದ್ದೇನೆ. ಆರನೇ ಶತಮಾನದ ಕಥೆ ಹೇಳಲಿದ್ದೇನೆ. ಈ ಸಿನಿಮಾ ಬಳಿಕ ಆ ಚಿತ್ರದ ಕೆಲಸಗಳು ಶುರುವಾಗುತ್ತದೆ ಎಂದು ಡೈರೆಕ್ಟರ್ ಕೆ.ಎಂ. ಚೈತನ್ಯ ಉತ್ತರಿಸಿದರು.

ಇನ್ನು ಬಲರಾಮನ ದಿನಗಳು ಚಿತ್ರದಲ್ಲಿ ವಿನೋದ್ ಪ್ರಭಾಕರ್ ಜೋಡಿಯಾಗಿ ಪ್ರಿಯಾ ಆನಂದ್ ನಟಿಸಿದ್ದು, ಅತುಲ್ ಕುಲಕರ್ಣಿ, ಶರತ್ ಲೋಹಿತಾಶ್ವ, ಆಶೀಷ್ ವಿದ್ಯಾರ್ಥಿ ಹಾಗೂ ಬಿಗ್ ಬಾಸ್ ಖ್ಯಾತಿಯ ವಿನಯ್ ಗೌಡ ಸೇರಿ ಹಲವು ಪ್ರತಿಭಾನ್ವಿತ ಕಲಾವಿದರ ದಂಡು ಚಿತ್ರದಲ್ಲಿದೆ.

ಪದ್ಮಾವತಿ ಫಿಲಂಸ್ ಬ್ಯಾನರ್ ಅಡಿಯಲ್ಲಿ ಪದ್ಮಾವತಿ ಜಯರಾಂ ಹಾಗೂ ಶ್ರೇಯಸ್ ಬಲರಾಮನ ದಿನಗಳು ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ದಕ್ಷಿಣ ಭಾರತದ ಖ್ಯಾತ ಸಂಗೀತ ನಿರ್ದೇಶಕ ಸಂತೋಷ್ ನಾರಾಯಣ್, ಸಂಗೀತ ಸಂಯೋಜಿಸಿರುವುದು ಈ ಚಿತ್ರದ ಹೈಲೈಟ್. ಹೆಚ್.ಸಿ.ವೇಣು ಛಾಯಾಗ್ರಹಣ ಹರಿದಾಸ್ ಕೆ.ಜಿ.ಎಫ್ ಸಂಕಲನ ಚಿತ್ರಕ್ಕಿದ್ದು ಇದೇ ತಿಂಗಳು 26ಕ್ಕೆ ಬಲರಾಮನ ದಿನಗಳು ಚಿತ್ರ ರಾಜ್ಯಾದ್ಯಂತ ಬಿಡುಗಡೆ ಆಗುತ್ತಿದೆ.




# ಜೂ. 26ಕ್ಕೆ ಆಕ್ಷನ್ ಥ್ರಿಲ್ಲರ್ ರಕ್ಷಕ 2

ಪ್ರೇಕ್ಷಕರಿಗೆ ಮನರಂಜನೆಯ ಹೊಸ ಪ್ಯಾಕೇಜ್ ನೀಡಲು ಸಜ್ಜಾಗಿರುವ ರಕ್ಷಕ 2 ಚಿತ್ರ ಜೂನ್ 26ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ಪ್ರೇಮ, ಆಕ್ಷನ್, ಸಸ್ಪೆನ್ಸ್, ಕುಟುಂಬದ ಭಾವನೆಗಳು ಹಾಗೂ ಹಾಸ್ಯದ ಅಂಶಗಳನ್ನು ಒಳಗೊಂಡಿರುವ ಈ ಚಿತ್ರವು ಎಲ್ಲ ವರ್ಗದ ಪ್ರೇಕ್ಷಕರನ್ನು ಸೆಳೆಯುವ ನಿರೀಕ್ಷೆ ಮೂಡಿಸಿದೆ.

ಶತದಿನೋತ್ಸವ ಆಚರಿಸಿದ್ದ ರಕ್ಷಕ ಹಾಗೂ ದೊಡ್ಡಣ್ಣ ಪುಟ್ಟಣ್ಣ ಚಿತ್ರಗಳ ನಿರ್ದೇಶಕ ಡಾ. ಆರ್. ವಿಜಯ್ ಕುಮಾರ್ ಅವರ ನಿರ್ದೇಶನದ ಮೂರನೇ ಚಿತ್ರ ಇದಾಗಿದೆ. ಬೆಂಗಳೂರು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಚಿತ್ರದ ಚಿತ್ರೀಕರಣ ನಡೆಸಲಾಗಿದೆ.

ಸರ್ವೆ ಸ್ಟುಡಿಯೋಸ್ ಬ್ಯಾನರ್ ಅಡಿಯಲ್ಲಿ ಶಿವು ಸರ್ವೇಶ್ ನಿರ್ಮಿಸಿರುವ ಈ ಚಿತ್ರಕ್ಕೆ ಡಾ. ಆರ್. ವಿಜಯ್ ಕುಮಾರ್ ಕಥೆ, ಚಿತ್ರಕಥೆ, ಸಂಭಾಷಣೆ, ಸಾಹಿತ್ಯ ಬರೆದು ನಿರ್ದೇಶನದ ಜೊತೆಗೆ ಸಂಗೀತ ಸಂಯೋಜನೆಯ ಜವಾಬ್ದಾರಿಯನ್ನೂ ನಿರ್ವಹಿಸಿದ್ದಾರೆ. ವೈಲೆಂಟ್ ವೇಲು ಅವರ ಸಾಹಸ ನಿರ್ದೇಶನ, ವಿಜಯ್ ಮಧಾಳೇ ಅವರ ಛಾಯಾಗ್ರಹಣ ಮತ್ತು ಸಂಕಲನ ಚಿತ್ರದ ಪ್ರಮುಖ ಆಕರ್ಷಣೆಯಾಗಿದೆ.

ಚಿತ್ರದಲ್ಲಿ ಡಾ. ಆರ್. ವಿಜಯ್ ಕುಮಾರ್ ದಕ್ಷ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದು, ಹಾಸ್ಯನಟ ಲಯಕೋಕಿಲ ಪೊಲೀಸ್ ಕಾನ್ಸ್ಟೇಬಲ್ ಪಾತ್ರದಲ್ಲಿ ಅಭಿನಯಿಸಿದ್ದಾರೆ. ರಾಜವಂಶಿ ಹಾಗೂ ರಾಧಿಕಾ ನಾಯಕ-ನಾಯಕಿಯಾಗಿ ನಟಿಸಿದ್ದು, ಮಧುಶ್ರೀ, ಹಿರಿಯ ನಟ ಸುರೇಂದ್ರ, ಕುಮಾರ್, ಮುರಳಿಕೃಷ್ಣ, ವಿಜಯ್ ಮಧಾಳೇ, ಅರವಿಂದ್ ಹಾಗೂ ರೋಹಿಣಿ ಪ್ರಮುಖ ಪಾತ್ರಗಳಿಗೆ ಜೀವ ತುಂಬಿದ್ದಾರೆ.

ವಿ.ಎಸ್.ಕೆ. ಸಿನಿ ಕ್ರಿಯೇಶನ್ಸ್ ಸಂಸ್ಥೆ ಮೂಲಕ ರಕ್ಷಕ 2 ಚಿತ್ರ ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದ್ದು, ಚಿತ್ರತಂಡ ಉತ್ತಮ ಪ್ರತಿಕ್ರಿಯೆಯ ನಿರೀಕ್ಷೆಯಲ್ಲಿದೆ.

# ಟ್ರೇಲರ್ ಕಟ್ ಮಾಡಲು ಹೆದರಿದ ಸಿಂಪಲ್ ಸುನಿ, ಮಾಧವನ್‌ಗೂ ಅಚ್ಚರಿ

## ಮೋಡ ಕವಿದ ವಾತಾವರಣದಲ್ಲಿ ಏನಿದೆ?




ನಿರ್ದೇಶನದ ಮೋಡ ಕವಿದ ವಾತಾವರಣ ಸಿನಿಮಾ ಜೂನ್ 26ಕ್ಕೆ ಬಿಡುಗಡೆಯಾಗುತ್ತಿದೆ. ಶೀಲಮ್, ಮೋಕ್ಷ ಕುಶಾಲ್, ಸಾತ್ವಿಕಾ ನಟಿಸಿರುವ ಚಿತ್ರದ ಟೀಸರ್ ಬಿಡುಗಡೆಗೊಂಡಿದ್ದು, ನಟ ಮಾಧವನ್ ಕೂಡ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸಿಂಪಲ್ ಸುನಿ ನಿರ್ದೇಶನದ ಮೋಡ ಕವಿದ ವಾತಾವರಣ ಚಿತ್ರವು ಇದೇ ಜೂನ್ 26ಕ್ಕೆ ತೆರೆಗೆ ಬರುತ್ತಿದೆ. ಈ ಹಿನ್ನೆಲೆಯಲ್ಲಿ ಇತ್ತೀಚೆಗೆ ಚಿತ್ರದ ಟೀಸರ್ ಬಿಡುಗಡೆ ಮಾಡಲಾಯಿತು. ಶೀಲಮ್, ಮೋಕ್ಷ ಕುಶಾಲ್, ಸಾತ್ವಿಕಾ ಚಿತ್ರದ ತಾರಾ ಜೋಡಿ. ವಿಭಿನ್ನವಾದ ಹಾಗೂ ಹಿತವಾಗಿರುವ ಪ್ರೇಮ ಕತೆಗಳ ಮೂಲಕ ಗುರುತಿಸಿಕೊಂಡಿರುವ ಸಿಂಪಲ್ ಸುನಿ ಅವರ ಈ ಚಿತ್ರದ ಮೇಲೂ ಪ್ರೇಕ್ಷಕರಿಗೆ ನಿರೀಕ್ಷೆ ಇದೆ. ಇತ್ತೀಚೆಗೆ ತಮಿಳು ನಟ ಮಾದವನ್ ಕೂಡ ಚಿತ್ರದ ದೃಶ್ಯಗಳನ್ನು ನೋಡಿ ಮೆಚ್ಚಿಕೊಂಡು ಶೀಲಮ್ ಅವರ ನಟನೆಗೂ ಅಭಿನಂದಿಸಿದ್ದಾರೆ. ಸಿಂಪಲ್ ಸುನಿ, ಒಂದು ಸರಳ ಪ್ರೇಮ ಕತೆಯ ನಂತರ ಬರುತ್ತಿರುವ ಮತ್ತೊಂದು ಅಚ್ಚುಕಟ್ಟಾದ ಪ್ರೇಮ ಕತೆಯ ಸಿನಿಮಾ ಇದು. ಇದು ನನ್ನ ಜೀವನದ ವಿಶೇಷ ಚಿತ್ರ. ನಾನು ಟ್ರೇಲರ್ ಚೆನ್ನಾಗಿ ಕಟ್ ಮಾಡುತ್ತೇನೆಂದು ಹೇಳುತ್ತಾರೆ. ಆದರೆ, ಈ ಚಿತ್ರಕ್ಕೆ ಟ್ರೇಲರ್ ಕಟ್ ಮಾಡಲು ಆಗುತ್ತಿಲ್ಲ. ಅದೇ ದೊಡ್ಡ ಸವಾಲು. ಏನೇ ಟ್ರೇಲರ್ ಕಟ್ ಮಾಡಿದರೂ ಚಿತ್ರದ ಕತೆ ಹೇಳಿದಂತೆ ಆಗುತ್ತದೆ. ಹೀಗಾಗಿ ಚಿತ್ರದ ಅರ್ಧ ಬಿಟ್ಟು ಉಳಿದರ್ಧ ಭಾಗದಲ್ಲಿ ಟ್ರೇಲರ್ ಕಟ್ ಮಾಡುವುದೇ ಸವಾಲು ಆಗಿದೆ. ಸಿನಿಮಾದಲ್ಲಿ ಏನೋ ಒಂದು ಅಂಶವಿದೆ. ಅದನ್ನು ನೀವು ಥಿಯೇಟರ್‌ನಲ್ಲಿಯೇ ನೋಡಬೇಕು ಎಂದರು.

**ಪವಾಡ ಆಗಬೇಕು:** ಶೀಲಮ್, ನಿಮ್ಮ ಮುಂದೆ ಹೀರೋ ಆಗಿ ಬರುತ್ತಿರುವೆ. ಹೀರೋ ಎಂದರೆ ಪವಾಡ. ಯಾಕೆಂದರೆ ಎಲ್ಲರೂ ಹೀರೋ ಆಗಲು ಆಗುವುದಿಲ್ಲ. ಎಷ್ಟೇ ದುಡ್ಡಿದ್ದರು, ನಟನೆಯ ಸ್ಕಿಲ್ ಇದ್ದರೂ ಹೀರೋ ಆಗುವುದಿಲ್ಲ. ಎಲ್ಲವನ್ನೂ ದಾಟಿ ಪವಾಡ ಆಗಬೇಕು. ನನ್ನ ಜೀವನದಲ್ಲಿ ಅದು ಆಗಿದೆ ಎಂದರು. ಮೈಸೂರು ರಮೇಶ್, ಶ್ರೀರಂಗರಾಜು, ಲೋಕೇಶ್ ಬೆಳವಾಡಿ, ಗೋವಾ ರಮೇಶ್ ಚಿತ್ರದ ನಿರ್ಮಾಪಕರು. ಸಂತೋಷ್ ರೈ ಪಾತಾಜೆ ಕ್ಯಾಮೆರಾ, ಜೂಡಾ ಸ್ಯಾಂಡಿ ಸಂಗೀತ ಇದೆ.

# ಭೀಮ ಸಿನಿಮಾ ಆದ್ಮೇಲೆ ಜಾಲಿ ಜಾಲಿ.. ಕೈಯಲ್ಲಿ 10 ಸಿನಿಮಾ..

# ಏರಿತು ಜಾಕ್ ಸಂಭಾವನೆ!

ಜಾಲಿ ಜಾಲಿ.. ಎಲ್ಲಾ ಜಾಲಿ.. ಒಂದಿಷ್ಟು ದಿನ ಈ ಡೈಲಾಗ್ ಸೋಶಿಯಲ್ ಮೀಡಿಯಾದಲ್ಲಿ ಸಿಕ್ಕಾಪಟ್ಟೆ ವೈರಲ್ ಆಗಿತ್ತು. ಇದ್ದಕ್ಕಿದ್ದಂತೆ ಕನ್ನಡ ಚಿತ್ರರಂಗದಲ್ಲಿ ಪ್ರತಿಭೆಯೊಂದು ಫೇಮಸ್ ಆಗಿತ್ತು. ಬಿಗ್ ಬಜೆಟ್ ಸಿನಿಮಾಗಳಲ್ಲಿ ಸಣ್ಣ ಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡರೂ ಇವರ ಪಾತ್ರದ ಇಂಪ್ಯಾಕ್ಟ್ ಜೋರಾಗಿಯೇ ಇತ್ತು. ಅಲ್ಲಿಂದ ಇಲ್ಲಿವರೆಗೂ ಇವರ ವೃತ್ತಿ ಬದುಕು ಫುಲ್ ಜಾಲಿ ಜಾಲಿ ಆಗ್ಬಿಟ್ಟಿದೆ.

ಬೆಂಗಳೂರಿನ ಊರ್ವಶಿ ಚಿತ್ರಮಂದಿರದ ಹಿಂಭಾಗದ ಸ್ಲಂನಲ್ಲಿ ಬೆಳೆದಿರುವ ಈ ಪ್ರತಿಭೆ ಕನ್ನಡ ಚಿತ್ರರಂಗದ ಬ್ಯುಸಿ ನಟ. ಅಂದ್ಹಾಗೆ ಭೀಮ ಸಿನಿಮಾದ ಬಳಿಕ ಜಾಲಿ ಜಾಲಿ ಜಾಕ್ ಅಂತಲೇ ಜನಪ್ರಿಯವಾಗಿದ್ದು, ಈಗ ಇವರ ಕೈಯಲ್ಲಿ ಬರೋಬ್ಬರಿ ಹತ್ತು ಸಿನಿಮಾಗಳಿವೆ. ಸುಮಾರು 8 ಸಿನಿಮಾಗಳು ಈಗಾಗಲೇ ಕೊನೆಯ ಹಂತದಲ್ಲಿ ಇವೆ.

ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ನಟಿಸಿದ ಟಗರು ಸಿನಿಮಾದಿಂದ ಇವರ ವೃತ್ತಿ ಬದುಕು ಆರಂಭ ಆಗಿತ್ತು. ಬಳಿಕ ಸಲಗ, ಭೀಮ, ಎಕ್ಕ ಹಾಗೂ ಯುಐ ಸಿನಿಮಾಗಳಲ್ಲಿ ನಟಿಸಿದ್ದಾರೆ. ಈ ಐದು ಸಿನಿಮಾಗಳ ಬಳಿಕ ಜಾಕ್ ಬ್ಯಾಕ್ ಟು ಬ್ಯಾಕ್ ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ಇದೇ ವೇಳೆ ಸಂಭಾವನೆ ಕೂಡ ಏರಿಕೆಯಾಗಿದೆ. ಇಂಡಸ್ಟ್ರಿ ಮೂಲಗಳ ಪ್ರಕಾರ ಜಾಕ್ ಸಂಭಾವನೆ ಎಷ್ಟು ಏರಿಕೆಯಾಗಿದೆ ಗೊತ್ತೇ?

**ಜಾಲಿ ಜಾಲಿ ಜಾಕ್ ಹಿನ್ನೆಲೆ ಏನು?**

ಜಾಕ್ ಸಿನಿಮಾಗೆ ಎಂಟ್ರಿ ಕೊಡುವುದಕ್ಕೂ ಮುನ್ನ ಬಿಲ್ಡರ್ ಆಗಿ ಗುರುತಿಸಿಕೊಂಡಿದ್ದರು. ಇಷ್ಟೇ ಅಲ್ಲದೆ, ರಾಜಕೀಯದಲ್ಲಿಯೂ ಇದ್ದಾರೆ. ಚಿಕ್ಕಪೇಟೆ ಕ್ಷೇತ್ರದ ಮಾಜಿ ಶಾಸಕ ದಿವಂಗತ ಆರ್.ವಿ. ದೇವರಾಜ್ ಅವರೊಂದಿಗೆ ಒಡನಾಟವಿತ್ತು. ಟಗರು ಬಳಿಕ ಸಿನಿಮಾರಂಗಕ್ಕೆ ಎಂಟ್ರಿ ಕೊಟ್ಟ ಜಾಕ್ ಈಗ ಸಿನಿಮಾಗಳಲ್ಲಿಯೂ ಬ್ಯುಸಿಯಾಗಿದ್ದಾರೆ. ಆದರೂ, ಅವರ ಹಿಂದಿನ ವೃತ್ತಿಯನ್ನು ಬಿಟ್ಟಿಲ್ಲ.

**ಜಾಕ್ ಕೈಯಲ್ಲಿ 10 ಸಿನಿಮಾಗಳು**

ಜಾಲಿ ಜಾಲಿ ಜಾಕ್ ಕನ್ನಡ ಚಿತ್ರರಂಗ ಬಹುಬೇಡಿಕೆಯ ಹಾಸ್ಯ ಹಾಗೂ ಖಳನಟ. ಇವರು ನಟಿಸಿದ 8 ಸಿನಿಮಾಗಳು ಶೂಟಿಂಗ್ ಹಂತದಲ್ಲಿ





ಇವೆ. ಇನ್ನೂ ಹೆಸರು ಸಿನಿಮಾಗಳು ಮಾತುಕತೆಯ ಹಂತದಲ್ಲಿ ಇವೆ. ದುನಿಯಾ ವಿಜಯ್ ನಟಿಸುತ್ತಿರುವ ಹೊಸ ಸಿನಿಮಾದ ಮಾತುಕತೆ ಕೂಡ ನಡೆಯುತ್ತಿದೆ ಅನ್ನೋ ಮಾಹಿತಿ ಇದೆ. ಸದ್ಯ ಜಾಕ್ ಸಿಟಿ ಲೈಟ್ಸ್, ಹಲ್ಕಡಾನ್, ಅತಿಕಾಯ, ಸಾಲಗಾರರ ಸಹಕಾರ ಸಂಘ, ಬೀಟ್ ಪೊಲೀಸ್, ಬೈರ, ಡಿಯರ್ ಜಾನು, ಗೋಲ್ಮಾಲ್ ಗ್ಯಾಂಗ್ ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ.

**ಸಿನಿಮಾದ ಸಂಭಾವನೆ ಎಷ್ಟು?**

ಜಾಲಿ ಜಾಲಿ ಜಾಕ್‌ಗೆ ಬೇಡಿಕೆ ಹೆಚ್ಚಾಗುತ್ತಿದ್ದಂತೆ ಸಂಭಾವನೆ ಕೂಡ ಹೆಚ್ಚಾಗಿದೆ ಎನ್ನಲಾಗಿದೆ. ಇಂಡಸ್ಟ್ರೀ ಮೂಲಗಳ ಪ್ರಕಾರ ಜಾಕ್‌ಗೆ ಒಂದು ಸಿನಿಮಾದಲ್ಲಿ ನಟಿಸುವುದಕ್ಕೆ ದಿನಕ್ಕೆ ಒಂದು ಲಕ್ಷದವರೆಗೂ ಸಂಭಾವನೆ ಪಡೆಯುತ್ತಿದ್ದಾರೆ. ಕೇವಲ ನಾಲ್ಕನೇ ತರಗತಿ ಓದಿರುವ ಜಾಕ್ ಸಿನಿಮಾ ಕ್ಷೇತ್ರದಲ್ಲಿ ತನ್ನದೇ ಹೆಸರು ಗಳಿಸಿ ಉತ್ತಮ ರೀತಿಯಲ್ಲಿ ಸಂಪಾದನೆಯನ್ನೂ ಮಾಡುತ್ತಿದ್ದಾರೆ. ಒಂದು ವೇಳೆ ದಿನಕ್ಕೆ ಒಂದು ಲಕ್ಷ ಸಂಪಾದನೆ ಪಡೆಯುತ್ತಿರೋದು ನಿಜವಾಗಿದ್ದರೆ, ಇದೊಂದು ಒಳ್ಳೆಯ ಅಚೀವ್‌ಮೆಂಟ್ ಆಗಲಿದೆ.

**ಸೂರ್ಯ ಅಭಿಮಾನಿ ಸಂಘದ ಅಧ್ಯಕ್ಷ**

ಜಾಕ್ ತಮಿಳು ನಟ ಸೂರ್ಯ ಅವರ ಫ್ಯಾನ್. ಹೀಗಾಗಿ ಜಾಕ್ ಕರ್ನಾಟಕದಲ್ಲಿನ ಸೂರ್ಯ ಅವರ ಅಭಿಮಾನಿ ಸಂಘದ ಅಧ್ಯಕ್ಷರಾಗಿದ್ದಾರೆ. ಸೂರ್ಯ ಅವರೊಂದಿಗೆ ನೇರವಾಗಿ ಒಡನಾಟವನ್ನು ಇಟ್ಟಿಕೊಂಡಿದ್ದಾರೆ. ಇವೆಲ್ಲದರ ಜೊತೆಗೆ ಸಮಾಜ ಸೇವೆಯಲ್ಲಿಯೂ ತೊಡಗಿಸಿಕೊಂಡಿದ್ದು, ಬೆಂಗಳೂರಿನ ಚುನಾವಣೆಯಲ್ಲಿ ಸ್ಪರ್ಧೆ ಮಾಡುವ ಆಸೆಯನ್ನು ಇಟ್ಟುಕೊಂಡಿದ್ದಾರೆ. ಸದ್ಯ ಕನ್ನಡ ಚಿತ್ರರಂಗದಲ್ಲಿ ಜಾಲಿ ಜಾಲಿ ಜಾಕ್ ಸಂಭಾವನೆ ಬಗ್ಗೆ ಚರ್ಚೆಯಾಗುತ್ತಿದೆ.

# ಯಶ್ ಟಾಕ್ಸಿಕ್ ಚಿತ್ರಕ್ಕಾಗಿ ಥಿಯೇಟರ್‌ಗಳ ನಡುವೆ ಭಾರೀ ಪೈಪೋಟಿ

## ಇದಪ್ಪಾ ರಾಯನ ಕ್ರೇಜ್ ಅಂದ್ರ

ಗೀತು ಮೋಹನ್ ದಾಸ್ ನಿರ್ದೇಶನದ ಟಾಕ್ಸಿಕ್ ಸಿನಿಮಾ ಭಾರೀ ಹೈಪ್ ಕ್ರಿಯೇಟ್ ಮಾಡ್ತಿದೆ. ಸಿನಿಮಾ ಬಿಡುಗಡೆಗೆ ಸರಿಯಾಗಿ 2 ತಿಂಗಳು ಬಾಕಿಯಿದೆ. ಶೀಘ್ರದಲ್ಲೇ ಪ್ರಚಾರ ಶುರುವಾಗಲಿದೆ. ದೊಡ್ಡಮಟ್ಟದಲ್ಲಿ ದೇಶವಿದೇಶಗಳಲ್ಲಿ ಸಿನಿಮಾ ತೆರೆಗಪ್ಪಳಿಸಲಿದೆ. ಬಾಕ್ಸಾಫೀಸ್ ಕಲೆಕ್ಷನ್ ಬಗ್ಗೆ ಈಗಾಗಲೇ ಚರ್ಚೆ ಶುರುವಾಗಿದೆ.

ಈ ವರ್ಷ ಕನ್ನಡದಲ್ಲಿ ಯಾವುದೇ ಸಿನಿಮಾ ದೊಡ್ಡದಾಗಿ ಸದ್ದು ಮಾಡಿಲ್ಲ. ಇದರಿಂದ ಚಿತ್ರಮಂದಿರಗಳಿಗೂ ಹಿನ್ನಡೆಯಾಗಿದೆ. ಪರಭಾಷೆಯ ಕೆಲ ಚಿತ್ರಗಳು ಕರ್ನಾಟಕದಲ್ಲಿ ಭರ್ಜರಿ ಪ್ರದರ್ಶನ ಕಂಡಿದ್ದವು. ಆದರೂ ರಾಜ್ಯದ ಮೂಲೆ ಮೂಲೆಯಲ್ಲಿರುವ ಚಿತ್ರಮಂದಿರಗಳು ಹೌಸ್‌ಫುಲ್ ಆಗಬೇಕು ಅಂದ್ರೆ ಟಾಕ್ಸಿಕ್ ಬರಬೇಕು ಎನ್ನುವಂತಾಗಿದೆ. ಚಿತ್ರಮಂದಿರದ ಮಾಲೀಕರು ಕೂಡ ಯಶ್ ಚಿತ್ರಕ್ಕಾಗಿ ಎದುರು ನೋಡುತ್ತಿದ್ದಾರೆ.

ದೊಡ್ಡ ಸಿನಿಮಾಗಳನ್ನು ಪ್ರದರ್ಶನ ಮಾಡಲು ಇವತ್ತಿಗೂ ಕೆಲವೆಡೆ ಚಿತ್ರಮಂದಿರಗಳ ನಡುವೆ ಪೈಪೋಟಿ ಏರ್ಪಡುತ್ತದೆ. ರೀಲ್ ಬಾಕ್ಸ್ ತಂದು ಸಿನಿಮಾ ಪ್ರದರ್ಶನ ಮಾಡುತ್ತಿದ್ದಾಗ ಇಂತಹ ಜಿದ್ದಾಜಿದ್ದಿ ಜಾಸ್ತಿ ಇರ್ತಿತ್ತು. ಈಗ ಸ್ಯಾಟಲೈಟ್ ಮೂಲಕ ಸಿನಿಮಾ ಪ್ರದರ್ಶನ ಮಾಡಲಾಗ್ತಿದೆ. ಹಾಗಾಗಿ ಬೇಡಿಕೆಗೆ ತಕ್ಕಂತೆ ಹೆಚ್ಚಿನ ಸ್ಕ್ರೀನ್‌ಗಳಲ್ಲಿ ಸಿನಿಮಾ ಬಿಡುಗಡೆ ಮಾಡಬಹುದು. ಅಕ್ಕಪಕ್ಕದ ಎರಡು ಚಿತ್ರಮಂದಿರಗಳಲ್ಲಿ ಸಿನಿಮಾ ಪ್ರದರ್ಶನ ಮಾಡಲು ಹೆದರುತ್ತಾರೆ. ಆದರೆ ಟಾಕ್ಸಿಕ್ ರೀತಿಯ ದೊಡ್ಡ ಸಿನಿಮಾ ಬಂದಾಗ ಧೈರ್ಯ ಮಾಡಿ ಸಿನಿಮಾ ಹಾಕುತ್ತಾರೆ. ಇದೇ ಕಾರಣಕ್ಕೆ ಚಿತ್ರಮಂದಿರದ ಮಾಲೀಕರು ಈ ಚಿತ್ರಕ್ಕಾಗಿ ಕಾತರದಿಂದ ಕಾಯುತ್ತಿದ್ದಾರೆ.

ದಾವಣಗೆರೆಯ ತ್ರಿಶೂಲ್ ಹಾಗೂ ತ್ರಿನೇತ್ರ ಚಿತ್ರಮಂದಿರದ ಆಡಳಿತ ಮಂಡಳಿ ಕೂಡ ಟಾಕ್ಸಿಕ್ ಚಿತ್ರಕ್ಕಾಗಿ ಕಾಯ್ತಿದೆ. ಚಿತ್ರಮಂದಿರದ ಸಿಬ್ಬಂದಿ ಈ ಬಗ್ಗೆ ವಿಜಯ್ ಮೈಲರ್ ಯೂಟ್ಯೂಬ್ ಚಾನಲ್ ಸಂದರ್ಶನದಲ್ಲಿ ಮಾತನಾಡಿದ್ದಾರೆ. ಆ ವೀಡಿಯೋ ವೈರಲ್ ಆಗ್ತಿದೆ. ಟಾಕ್ಸಿಕ್ ಬಹುನಿರೀಕ್ಷಿತ ಸಿನಿಮಾ. ಇತ್ತೀಚೆಗೆ ಇಂತಹ ಸಿನಿಮಾ ಬಂದಿಲ್ಲ. ಕೆಜಿಎಫ್-2 ಬಳಿಕ ಬರ್ತಿರೋ ಯಶ್ ಸಿನಿಮಾ ಇದು. ಹಾಗಾಗಿ ಎಲ್ಲರಿಗೂ ಕುತೂಹಲ ಇದೆ. ನಮಗೂ ಸಿನಿಮಾ ಪ್ರದರ್ಶನ ಮಾಡುವ ಆಸೆಯಿದೆ. ದೊಡ್ಡ ಸಿನಿಮಾ ಆಗಿರುವುದರಿಂದ ದಾವಣಗೆರೆಯ 3 ಚಿತ್ರಮಂದಿರಗಳಲ್ಲಿ ಬಿಡುಗಡೆ ಆಗುವ ಸಾಧ್ಯತೆಯಿದೆ. ಎಲ್ಲವೂ ಹೌಸ್‌ಫುಲ್ ಆಗುವ ನಿರೀಕ್ಷೆಯಿದೆ. ಶ್ರಮದ ಜೊತೆ ಅದೃಷ್ಟ ಕೂಡ ಯಶ್ ಜೊತೆಗಿದೆ. ಅದಕ್ಕೆ ಇಂತಹ ಗೆಲುವು ಸಿಗುತ್ತಿದೆ ಎಂದಿದ್ದಾರೆ.

ಟಾಕ್ಸಿಕ್ ಸಿನಿಮಾ ಬಂದ್ರೆ ಕಮ್ಮಿ ಅಂದ್ರು ಒಂದು ತಿಂಗಳು ಹೌಸ್‌ಫುಲ್ ಆಗುತ್ತೆ ಎಂದು ನಗರದ ವೀರಭದ್ರೇಶ್ವರ ಚಿತ್ರಮಂದಿರದ ಸಿಬ್ಬಂದಿ ಹೇಳಿದ್ದರು. ಎಸ್‌ಎಸ್‌ಟಿವಿ ಯೂಟ್ಯೂಬ್ ಚಾನಲ್ ಸಂದರ್ಶನದಲ್ಲಿ ಅವರು ಮಾತನಾಡಿದ್ದರು. ರಕ್ಕಸಪುರದೋಳ್ ಸಿನಿಮಾ ನಮ್ಮ ಚಿತ್ರಮಂದಿರದಲ್ಲಿ ಪ್ರದರ್ಶನವಾಗ್ತಿದೆ. ಪರವಾಗಿಲ್ಲ, ಇನ್ನುಳಿದಂತೆ ಯಾವುದೇ ಸಿನಿಮಾ ಇತ್ತೀಚೆಗೆ ಸದ್ದು ಮಾಡಲಿಲ್ಲ. ಟಾಕ್ಸಿಕ್ ಚಿತ್ರಕ್ಕಾಗಿ ನಾವು ಕಾಯ್ತಿದ್ದೀವಿ ಎಂದಿದ್ದರು. ಎರಡೂ ಟೀಸರ್ ಚೆನ್ನಾಗಿದೆ, ಹಿಟ್ ಆಗಿದೆ. 100%ರಷ್ಟು ಸಿನಿಮಾ ಗೆದ್ದೇ ಗೆಲ್ಲುತ್ತೆ. ಬಾಕ್ಸಾ ಫೀಸ್‌ನಲ್ಲಿ ಸಿನಿಮಾ ಧೂಳೆಬ್ಬಿಸುವುದರಲ್ಲಿ ದೂಸ್ರಾ ಮಾತಿಲ್ಲ ಎಂದಿದ್ದರು.

ಎಲ್ಲಾ ಅಂದುಕೊಂಡಂತೆ ಆಗಿದ್ರೆ, ಈಗಾಗಲೇ ಟಾಕ್ಸಿಕ್ ಸಿನಿಮಾ ತೆರೆಗೆ ಬರಬೇಕಿತ್ತು. ಮಾರ್ಚ್ 19ಕ್ಕೆ ಸಿನಿಮಾ ಬಿಡುಗಡೆ ಮಾಡುವುದಾಗಿ ಮೊದಲಿಗೆ ಹೇಳಿದ್ದರು. ಬಳಿಕ ಜೂನ್ 4ಕ್ಕೆ ಪೋಸ್ಟ್ ಪೋನ್ ಆಗಿತ್ತು. ಇದೀಗ ಅಂತಿಮವಾಗಿ ಆಗಸ್ಟ್ 26ರಂದು ಸಿನಿಮಾ ತೆರೆಗೆ ಬರುವುದು ಪಕ್ಕಾ ಆಗಿದೆ. 500 ಕೋಟಿ ರೂ.ಗೂ ಅಧಿಕ ಬಜೆಟ್‌ನಲ್ಲಿ ಸಿನಿಮಾ ನಿರ್ಮಾಣವಾಗ್ತಿದೆ. ಹಾಲಿವುಡ್ ಪ್ರೇಕ್ಷಕರನ್ನು ಮನದಲ್ಲಿಟ್ಟುಕೊಂಡು ಸಿನಿಮಾ ಕಟ್ಟಿಕೊಡಲಾಗ್ತಿದೆ. ದ್ವಿಪಾತ್ರಗಳಲ್ಲಿ ತಂದೆ, ಮಗನಾಗಿ ಯಶ್ ನಟಿಸಿದ್ದಾರೆ. ಎರಡು ಭಾಗಗಳಾಗಿ ಸಿನಿಮಾ ತೆರೆಗೆ ಬರಬಹುದು ಎನ್ನುವ ಊಹಾಪೋಹ ಶುರುವಾಗಿದೆ. ಸಿನಿಮಾ ಬಾಕ್ಸಾಫೀಸ್‌ನಲ್ಲಿ ಹೇಗೆ ಸದ್ದು ಮಾಡುತ್ತೆ ಕಾದು ನೋಡಬೇಕಿದೆ.



# ಭೂಸ್ವಾಧೀನ: ಹೆಚ್ಚಿನ ಪರಿಹಾರಕ್ಕೆ ಆಗ್ರಹ

## ವಿದ್ಯುತ್ ನಿಗಮ ಖಾಸಗೀಕರಣ ವಿರೋಧಿಸಿ ರೈತರ ಪ್ರತಿಭಟನೆ । ಜೋಡೆತ್ತುಗಳ ಮೆರವಣಿಗೆ

• ಪ್ರಜೋದಯ ವರದಿ



**ಹೊಳೆನರಸೀಪುರ:** ರಾಷ್ಟ್ರೀಯ ಹೆದ್ದಾರಿ ಅಗಲೀಕರಣಕ್ಕೆ ಸ್ವಾಧೀನಪಡಿಸಿಕೊಂಡ ಭೂಮಿಗೆ ಹೆಚ್ಚಿನ ಪರಿಹಾರ ನೀಡಬೇಕು ಹಾಗೂ ವಿದ್ಯುತ್ ನಿಗಮ ಖಾಸಗೀಕರಣ ವಿರೋಧಿಸಿ ರೈತರು ಪ್ರತಿಭಟನೆ ನಡೆಸಿದರು.

ತಾಲ್ಲೂಕಿನ ದೊಡ್ಡಳ್ಳಿ ಗ್ರಾಮ ಸಮೀಪ ಬಿಳಿಕೆರೆ, ಬೇಲೂರು ರಾಷ್ಟ್ರೀಯ ಹೆದ್ದಾರಿ 373 ರಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕಾರ್ಮಿಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಜೆ.ಜವರೇಗೌಡ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.

ರಾಷ್ಟ್ರೀಯ ಹೆದ್ದಾರಿ ಅಗಲೀಕರಣಕ್ಕಾಗಿ ರೈತರ ನೂರಾರು ಎಕರೆಯಷ್ಟು ಕೃಷಿ ಭೂಮಿ ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಫಲವತ್ತಾದ ಕೃಷಿ ಭೂಮಿ ರೈತರ ಜೀವನಾಡಿ ಯಾಗಿತ್ತು. ಆದರೆ ರಸ್ತೆ ಅಗಲೀಕರಣಕ್ಕೆ ಒಳಪಡಿಸಿಕೊಳ್ಳಲಾಗುತ್ತಿದೆ. ಇದರಿಂದ ರೈತರಿಗೆ ಮಾರುಕಟ್ಟೆ ಬೆಲೆಗಿಂತ 5 ಪಟ್ಟು ಹೆಚ್ಚಿನ ಪರಿಹಾರ ನೀಡಬೇಕು. ಕೇಂದ್ರ ಹಾಗೂ ರಾಜ್ಯ ಸರಕಾರಗಳೆರಡೂ ಅತ್ಯಲ್ಪ ಪ್ರಮಾಣದ ಪರಿಹಾರ ನೀಡಿ ರೈತರಿಗೆ ನಷ್ಟ ಉಂಟು ಮಾಡುತ್ತಿದೆ. ಇದರತ್ತ ಜನಪ್ರತಿನಿಧಿಗಳು ಗಮನ ಹರಿಸಬೇಕು ಎಂದು ಒತ್ತಾಯಿಸಿದರು.

ವಿದ್ಯುತ್ ನಿಗಮವನ್ನು ಖಾಸಗೀಕರಣ ಮಾಡುವ ಹುನ್ನಾರ ನಡೆದಿದೆ. ವಿಧಾನ ಸಭೆ ಅಧಿವೇಶನದಲ್ಲೂ ಈ ಬಗ್ಗೆ ಹುನ್ನಾರ ನಡೆಸಲಾಗತ್ತಿದೆ. ಈ ಬಗ್ಗೆ ಗಮನಕ್ಕೆ ಬಂದಿದೆ. ಸರ್ಕಾರ ವಿದ್ಯುತ್ ನಿಗಮವನ್ನು ಖಾಸಗೀಕರಣ ಮಾಡುವುದರಿಂದ ಬಹಳಷ್ಟು ಕಾರ್ಮಿಕರು ಕೆಲಸ ಕಳೆದುಕೊಳ್ಳಲಿದ್ದಾರೆ. ಇದರಿಂದ ನಿರುದ್ಯೋಗ ಸಮಸ್ಯೆ ಮತ್ತಷ್ಟೂ ಉಲ್ಬಣವಾಗಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗೃಹಬಳಕೆಗೆ ಉಚಿತ ವಿದ್ಯುತ್ ನೀಡಿರುವ ಗ್ಯಾರಂಟಿ ಯೋಜನೆಗೂ ಹೊಡೆತ ಬೀಳಲಿದೆ. ಅಲ್ಲದೆ ವಿದ್ಯುತ್ ದರ ಸಹ ಏರಿಕೆ ಕಾರಣಬಹುದು. ರೈತರ ಪಂಪ್‌ಸೆಟ್ ವಿದ್ಯುತ್‌ಗೂ ದರ ನಿಗಧಿಸಿ ಬರೆ ಎಳೆಯಲಾಗುವ ಹುನ್ನಾರ ಇದಾಗಿದೆ. ಇದರಿಂದ ಖಾಸಗೀಕರಣ ಬೇಡ. ಇದನ್ನು ಎಲ್ಲ ಅಧಿಕಾರಿಗಳು, ಜನಪ್ರತಿನಿಧಿಗಳು ವಿರೋಧಿಸಬೇಕು. ಯಥಾಸ್ಥಿತಿ ಅನುಸರಿಸಬೇಕು ಎಂದು ಆಗ್ರಹಿಸಿದರು.

ದೊಡ್ಡಳ್ಳಿ ಸಂತೆ ಮೈದಾನದಲ್ಲಿ ಹಲವು ವರ್ಷಗಳಿಂದ ಬೆಳೆದು ನಿಂತಿದ್ದ ಮರಗಳ ಮಾರಣ ಹೋಮ ಮಾಡಲಾಗಿದೆ. ಮತ್ತೆ ಸಸಿ ನೆಟ್ಟು ಬೆಳೆಸಬೇಕು ಎಂದು ಹಲವು ಬಾರಿ ಮನವಿ ಮಾಡಿದ್ದಾಗಿದೆ. ಆದರೆ ಅರಣ್ಯ ಇಲಾಖೆ ಗಮನ ಹರಿಸಿಲ್ಲ. ಇವುಗಳ ಬಗ್ಗೆ ಜಾಗೃತಿ ಮೂಡಿಸಬೇಕಿರುವ ಇಲಾಖೆಗಳೇ ಮರಗಳ ಹನನ ಮಾಡುವ ಕೆಲಸ ನಡೆಸಿರುವುದು ಸರಿಯಲ್ಲ ಎಂದು ಎಚ್ಚರಿಸಿದರು.

ಮೈಸೂರು- ಹಾಸನ ನಡುವಿನ ದೊಡ್ಡಳ್ಳಿ ಗ್ರಾಮ ಸಮೀಪದ ಹೆದ್ದಾರಿಯಲ್ಲಿ ಜೋಡೆತ್ತುಗಳೊಂದಿಗೆ ಪ್ರತಿಭಟನೆ ನಡೆಸಲಾಯಿತು.

ಕಾರ್ಮಿಕ ವೇದಿಕೆಯ ಉಪಾಧ್ಯಕ್ಷ ಮಧು, ವೇದಿಕೆಯ ಕಾನೂನು ಸಲಹೆಗಾರ ವಕೀಲ ಪುಟ್ಟರಾಜು, ತಾಲ್ಲೂಕು ಅಧ್ಯಕ್ಷ ಡಿ.ಎಸ್.ಚಲುವೇಗೌಡ, ರೈತರಾದ ಮನೋಹರ್, ಅರುಣ ಮತ್ತಿತರರು ಹಾಜರಿದ್ದರು.

### ಅಂತರಾಷ್ಟ್ರೀಯ ಮಾದಕ ವಸ್ತು ವ್ಯಸನ ಮತ್ತು ಅಕ್ರಮ ಕಳ್ಳಸಾಗಣೆ ವಿರೋಧಿ ದಿನ

# ಜೈಲು ಹಕ್ಕಿಗಳು ಒಳ್ಳೆಯ ಪ್ರಜೆಗಳಾಗಿ ಬದಲಾಗಿ

• ಪ್ರಜೋದಯ ವರದಿ



**ಹಾಸನ:** ಬಂಧಿ ನಿವಾಸಿಗಳು ಗೊತ್ತೊ ಗೊತ್ತಿಲ್ಲದೆಯೇ ಕೆಲವೊಂದು ತಪ್ಪುಗಳನ್ನು ಮಾಡಿರುತ್ತೀರಿ, ತಪ್ಪನ್ನು ಅರಿತುಕೊಂಡು ಉತ್ತಮ ರೀತಿಯಲ್ಲಿ ಬದಲಾವಣೆ ಮಾಡಿಕೊಂಡು ಒಳ್ಳೆಯ ಪ್ರಜೆಗಳಾಗಿ ಬಾಳುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಹೇಮಾವತಿ ಅವರು ತಿಳಿಸಿದ್ದಾರೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಆರೋಗ್ಯ ವಿಭಾಗ, ಹಾಸನ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಜಿಲ್ಲಾ ಕಾರಾಗೃಹ ಇಲಾಖೆ ಹಾಗೂ ಜಿಲ್ಲಾ ಜಿಲ್ಲಾ ಪೊಲೀಸ್ ಇಲಾಖೆ ಸಹಯೋಗದಲ್ಲಿ ಗುರುವಾರ ಜಿಲ್ಲಾ ಕಾರಾಗೃಹದಲ್ಲಿ ಆಯೋಜಿಸಲಾಗಿದ್ದ ಅಂತರಾಷ್ಟ್ರೀಯ ಮಾದಕ ವಸ್ತು ವ್ಯಸನ ಮತ್ತು ಅಕ್ರಮ ಕಳ್ಳ ಸಾಗಣೆ ವಿರೋಧಿ ದಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಾದಕ ವಸ್ತುಗಳಿಂದಾಗುವ ದುಷ್ಪರಿಣಾಮಗಳ ಕುರಿತು ತಿಳಿಸುತ್ತಾ ಬಂಧಿ ನಿವಾಸಿಗಳು ಇಲ್ಲಿಂದ ಹೋದ ನಂತರ ಉತ್ತಮ ರೀತಿಯ ಜೀವನ ಶೈಲಿಯನ್ನು ರೂಡಿಸಿಕೊಳ್ಳುವಂತೆ ತಿಳಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜಿ.ಕೆ.ದಾಕ್ಷಾಯಿಣಿ ಅವರು ಮಾತನಾಡಿ, ಪೋಕ್ಸೋ ಕಾಯ್ದೆಗಳ ಕುರಿತು ಅರಿವು ಮೂಡಿಸಿದರು ಹಾಗೂ ಮಾದಕ ವಸ್ತುಗಳ ಸೇವನೆಯಿಂದ ವ್ಯಕ್ತಿಗೆ ಆಗುವ ದೈಹಿಕ ಸಾಮಾಜಿಕ ಮತ್ತು ಭಾವನಾತ್ಮಕ ಸಮಸ್ಯೆಗಳ ಬಗ್ಗೆ ತಿಳಿಸಿದರು.

ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿ ಡಾ॥ ನಾಗೇಶ್ ಪಿ. ಅವರು ಮಾತನಾಡಿ, ಮಾದಕ ವಸ್ತು ವ್ಯಸನ ದಿನವನ್ನು ಆಚರಿಸುವುದರ ಹಿಂದಿನ ಉದ್ದೇಶಗಳ ಕುರಿತು ತಿಳಿಸಿದರು ವ್ಯಸನ ಎನ್ನುವುದು ಒಂದು ಜ್ವಲಂತ ಸಮಸ್ಯೆಯಾಗಿದ್ದು, ಇವುಗಳ ಸೇವನೆಯಿಂದ ಹಲವು ರೀತಿಯಾದ ತೊಂದರೆಗಳನ್ನು ಅನುಭವಿಸುತ್ತಿರು ತ್ತೇವೆ. ಜನರು ಅವುಗಳ ಸೇವನೆ ಯಿಂದ ದೂರವಿದ್ದು ಸುಂದರವಾದ ಜೀವನವನ್ನು ನಿರ್ಮಿಸಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ಮನೋವೈದ್ಯರಾದ ಡಾ॥ ಜೆ. ಕಾರ್ತಿಕ್ ಅವರು ಮಾತನಾಡಿ, ಮಾದಕ ವಸ್ತುಗಳ ಬಳಕೆಯು ಮಾನಸಿಕ ಸಮಸ್ಯೆಗಳಿಗೆ ಮುಖ್ಯ ಕಾರಣವಾಗಿದ್ದು ಇವುಗಳ ಬಳಕೆಯಿಂದ ದೈಹಿಕವಾಗಿ ಮತ್ತು ಮಾನಸಿಕವಾಗಿ ವ್ಯಕ್ತಿಗಳು ಸಮಸ್ಯೆಯನ್ನು ಅನುಭವಿಸುತ್ತಿರುತ್ತಾರೆ, ಮಾನಸಿಕ ಸಮಸ್ಯೆಗಳು ಯಾರಿಗಾದರು ಬರಬಹುದು, ಈ ಸಮಸ್ಯೆಗಳು ಬಂದಂತಹ ಸಂದರ್ಭದಲ್ಲಿ ಯಾವುದೇ ಆತಂಕಕ್ಕೊಳಗಾಗದೆ ವೈದ್ಯರನ್ನು ಬೇಟಿಯಾಗಬಹುದು ಅಥವಾ ಉಚಿತ ಮಾನಸಿಕ ಆರೋಗ್ಯ ಸಹಾಯವಾಣಿ 14416ಕ್ಕೆ ಕರೆ ಮಾಡಿ ಎಂದು ಮಾಹಿತಿ ನೀಡಿದರು.

ಜಿಲ್ಲಾ ಕಾರಾಗೃಹ ಅಧೀಕ್ಷಕ ಪ್ರಸನ್ನ ಅವರು ಮಾತನಾಡಿ, ಮಾದಕ ವಸ್ತುಗಳನ್ನು ಬಳಸಿದಾಗ ವ್ಯಕ್ತಿಗಳು ತಮಗೆ ಅರಿವಿಲ್ಲದಂತೆ ತಪ್ಪುಗಳನ್ನು ಮಾಡಿ ಶಿಕ್ಷೆಗೆ ಗುರಿಯಾಗುವಂತಹ ಸಾಧ್ಯತೆ ಹೆಚ್ಚಿರುತ್ತದೆ. ಇದರಿಂದ ಅವರ ಕುಟುಂಬದವರು ಅನುಭವಿಸುವ ಸಮಸ್ಯೆಗಳ ಕುರಿತು ಹೇಳಿದರು.

ಕಾರ್ಯಕ್ರಮದಲ್ಲಿ ಅಪರ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿಧಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಹಾಗೂ ಜಿಲ್ಲಾ ಕಾರಾಗೃಹದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಹಾಗೂ ಇತರರು ಉಪಸ್ಥಿತರಿದ್ದರು.



**ಹಾಸನ: ಪೊಲೀಸ್ ಇಲಾಖೆಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿರುವ ಹಿನ್ನೆಲೆಯಲ್ಲಿ ಹಾಸನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ ಹಾಗೂ ಅಪರ ಪೊಲೀಸ್ ವರಿಷ್ಠಾಧಿಕಾರಿ ಎನ್.ಶ್ರೀನಿಧಿ ಅವರಿಗೆ ಡಿ.ಜಿ ಐ.ಜಿ.ಪಿ ಪ್ರಶಂಸನಾ ಪದಕ ಪ್ರಶಸ್ತಿ ಘೋಷಣೆಯಾಗಿರುವ ಹಿನ್ನೆಲೆಯಲ್ಲಿ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಹಾಸನ ಜಿಲ್ಲಾ ಶಾಖೆಯ ಸಭಾಪತಿ ಹಾಗೂ ಕಾರ್ಯಕಾರಿಣಿ ಮಂಡಳಿಯ ಸದಸ್ಯರು ಭೇಟಿ ನೀಡಿ ಅಭಿನಂದನೆಗಳನ್ನು ಸಲ್ಲಿಸಿದರು.**

# ಆ.5 ರಂದು ಕರಡು ಮತದಾರರ ಪಟ್ಟಿ ಪ್ರಕಟ

• ಪ್ರಜೋದಯ ವರದಿ



**ಹೊಳೆನರಸೀಪುರ:** ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ನಡೆಯುತ್ತಿದ್ದು, ಪಾರದರ್ಶಕವಾಗಿ ಆರೋಗ್ಯಕರವಾದ ಮತದಾರರ ಪಟ್ಟಿಯನ್ನು ತಯಾರಿಸುವಂತೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾ ಅಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಅಧಿಕಾರಿಗಳಿಗೆ ತಿಳಿಸಿದ್ದಾರೆ.

ಪಟ್ಟಣದ ಶಿಕ್ಷಕರ ಭವನದಲ್ಲಿ ಗುರುವಾರ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ಕುರಿತು ಆಯೋಜಿಸಿದ್ದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಆ.5 ರಂದು ಕರಡು ಮತದಾರರ ಪಟ್ಟಿ ಪ್ರಕಟ ಮಾಡಲಾಗುವುದು. ಯಾವುದೇ ದೋಷ ಕಂಡು ಬಂದರೆ ಮತದಾರರು ದಾಖಲಾತಿಗಳೊಂದಿಗೆ ಹಕ್ಕು, ಆಕ್ಷೇಪಣೆಯನ್ನು ಸಹಾಯಕ ಚುನಾವಣಾ ನೋಂದಣಿ ಅಧಿಕಾರಿಗಳಿಗೆ ಸಲ್ಲಿಸುವ ಮೂಲಕ ಪರಿಹಾರ ಕಂಡುಕೊಳ್ಳಬಹುದು ಎಂದು ಹೇಳಿದರು.

ಮತಗಟ್ಟೆ ಅಧಿಕಾರಿಗಳು ಜೂ.30 ರಿಂದ ಜುಲೈ 29 ರ ವರೆಗೆ ಮನೆ ಮನೆಗೆ ಭೇಟಿ ನೀಡಿ ಪೂರ್ವದಲ್ಲಿ ಮುದ್ರಣಗೊಂಡಿರುವ ನಮೂನೆಯನ್ನು ದ್ವಿ ಪ್ರತಿಯಲ್ಲಿ ನೀಡುತ್ತಾರೆ, ಮತದಾರರು ಅದನ್ನು ಸಂಪೂರ್ಣವಾಗಿ ಭರ್ತಿ ಮಾಡಿ ಪ್ರಸ್ತುತ ಭಾವಚಿತ್ರ ಅಂಟಿಸಿ ಕಡ್ಡಾಯವಾಗಿ ಸಹಿ ಮಾಡಿ ಒಂದು ಪ್ರತಿಯನ್ನು ಮತಗಟ್ಟೆ ಅಧಿಕಾರಿಗೆ ಹಿಂದಿರುಗಿಸಬೇಕು ಎಂದರು.

ಕರಡು ಮತದಾರರ ಪಟ್ಟಿಯನ್ನು ಆ.5 ರಂದು ಪ್ರಕಟಿಸಲಾಗುತ್ತದೆ, ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಆ.5 ರಿಂದ ಸೆ.4ರ ವರೆಗೆ, ಹಕ್ಕು ಮತ್ತು ಆಕ್ಷೇಪಣೆಗಳ ತಿರುವಳಿ ಆ.5 ರಿಂದ ಅ.3 ರ ವರೆಗೆ, ಅಂತಿಮ ಮತದಾರರ ಪಟ್ಟಿಯನ್ನು ಅ.7 ರಂದು ಪ್ರಕಟಣೆ ಮಾಡಲಾಗುತ್ತದೆ ಎಂದು ತಿಳಿಸಿದರು.

ವರ್ಷದಲ್ಲಿ ನಾಲ್ಕು ಬಾರಿ ಜನವರಿ, ಏಪ್ರಿಲ್, ಜುಲೈ ಮತ್ತು ಅಕ್ಟೋಬರ್ 1 ರಂದು ಮತದಾರರ ಪಟ್ಟಿ ಪರಿಷ್ಕರಣೆ ಆಗುತ್ತದೆ ಆ ಸಂದರ್ಭದಲ್ಲಿ 18 ವರ್ಷ ಪೂರೈಸಿದವರು ಹೊಸ ಅರ್ಜಿ ಸಲ್ಲಿಸಬಹುದಾಗಿದ್ದು, ಪ್ರಸ್ತುತ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯಾಗಿ ಹೊಸ ಮತದಾರರ ಪಟ್ಟಿ ತಯಾರಿಸಲಾಗುತ್ತದೆ ಎಂದು ತಿಳಿಸಿದರು.


ಮತದಾರರ ಪಟ್ಟಿ ಪರಿಷ್ಕರಣೆ ವೇಳೆ ಅರ್ಹ ಮತದಾರರ ಹೆಸರು ಸೇರ್ಪಡೆ, ಮೃತರಾದವರ ಅಥವಾ ಸ್ಥಳಾಂತರಗೊಂಡವರ ಹೆಸರುಗಳ ತೆಗೆದು ಹಾಕುವಿಕೆ ಹಾಗೂ ತಿದ್ದುಪಡಿಗಳನ್ನು ನಿಖರವಾಗಿ ಕೈಗೊಳ್ಳಬೇಕು. ಯಾವುದೇ ಅರ್ಹ ಮತದಾರ ಮತದಾನದ ಹಕ್ಕಿನಿಂದ ವಂಚಿತರಾಗದಂತೆ ಕ್ರಮ ವಹಿಸುವುದು ಅಧಿಕಾರಿಗಳ ಪ್ರಮುಖ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಪ್ರತಿ ಸೂಪರ್ ವೈಸರ್ ಅಡಿಯಲ್ಲಿ 8 ರಿಂದ 10 ಬಿ.ಎಲ್.ಒ ಗಳು ಕಾರ್ಯ ನಿರ್ವಹಿಸುತ್ತಿದ್ದು, ತಮ್ಮ ವ್ಯಾಪ್ತಿಯ ಎಲ್ಲಾ ಬಿಎಲ್‌ಒಗಳ ಸಂಪೂರ್ಣ ವಿವರಗಳನ್ನು ಹೊಂದಿರಬೇಕು. ಜೊತೆಗೆ ಅವರ ಕಾರ್ಯ ಚಟುವಟಿಕೆಗಳ ಮೇಲೆ ನಿರಂತರ ನಿಗಾ ವಹಿಸಿ ಮಾರ್ಗದರ್ಶನ ನೀಡಬೇಕು ಎಂದು ತಿಳಿಸಿದರು.

ಸಂಸದ ಶ್ರೇಯಸ್.ಎಂ ಪಟೇಲ್ ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ಮತಗಟ್ಟೆ ಅಧಿಕಾರಿಗಳು, ಮೇಲ್ವಿಚಾರಕರು, ಏಜೆಂಟರು ಹಾಜರಿದ್ದರು.

## ತಿಂಗಳಾಂತ್ಯಕ್ಕೆ ಹಲವೆಡೆ ಮಳೆ ಚುರುಕು

• ಪ್ರಜೋದಯ ವರದಿ



**ಬೆಂಗಳೂರು:** ಕರಾವಳಿ ಕರ್ನಾಟಕದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡದಲ್ಲಿ ಮಳೆ ಅಬ್ಬರಿಸುತ್ತಿದೆ. ಉಳಿದೆಡೆ ಒಣ ಹವಾಮಾನ ಇದ್ದು ಅಲ್ಲಲ್ಲಿ ಹಗುರ ಮಳೆಯಾಗುತ್ತಿದೆ. ಜೂ.29 ರ ಬಳಿಕ ಮುಂಗಾರು ಚುರುಕಾಗಲಿದ್ದು, ಕರಾವಳಿ ಹಾಗೂ ಪಶ್ಚಿಮ ಘಟ್ಟದ ಜಿಲ್ಲೆಗಳು ಹಾಗೂ ದಕ್ಷಿಣ ಕರ್ನಾಟಕದಲ್ಲಿ ಮಳೆಯು ಜೋರಾಗಲಿದೆ.

**ಜೂನ್ 26 ರ ಹವಾಮಾನ**

ಶುಕ್ರವಾರ ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿಗೆ ಮಾತ್ರ ಭಾರಿ ಮಳೆಯ ಮುನ್ಸೂಚನೆ ಇದ್ದು, ಯೆಲ್ಲೋ ಅಲರ್ಟ್ ಕೊಡಲಾಗಿದೆ. ಉಳಿದೆಡೆ ಹಗುರ ಮಳೆಯಷ್ಟೇ ಆಗಲಿದೆ. ಕರಾವಳಿಯಲ್ಲಿ ಜು.2 ರವರೆಗೆ ಭಾರಿ ಹಾಗೂ ಅತಿ ಭಾರಿ ಮಳೆಯ ಮುನ್ಸೂಚನೆ ಇದೆ.

**ಜೂನ್ 29 ಕ್ಕೆ 6 ಜಿಲ್ಲೆಗೆ ಅತಿಭಾರಿ ಮಳೆಯ ಆರೆಂಜ್ ಅಲರ್ಟ್**

ರಾಜ್ಯದಲ್ಲಿ ಜೂನ್ 29 ರಿಂದ ಮಳೆ ಚುರುಕಾಗಲಿದೆ. ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡಕ್ಕೆ ಜೂನ್ 2 ರವರೆಗೂ ಅತಿ ಭಾರಿ ಮಳೆಯ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಅಲ್ಲದೆ ಶಿವಮೊಗ್ಗ, ಕೊಡಗು, ಚಿಕ್ಕಮಂಗಳೂರು ಜಿಲ್ಲೆಗಳಿಗೆ ಜೂನ್ ಜೂನ್ 29, 30 ಹಾಗೂ ಜುಲೈ 1 ರಂದು ಅತಿ ಭಾರಿ ಮಳೆಯಾಗಲಿದೆ.

**ಯೆಲ್ಲೋ ಅಲರ್ಟ್ ಎಲ್ಲೆಲ್ಲಿ?**

ಹಾಸನ, ದಾವಣಗೆರೆ, ಯಾದಗಿರಿ, ಕಲಬುರ್ಗಿ, ಬೆಳಗಾವಿ, ಬೀದರ್, ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಿಗೆ ಜೂನ್ 29 ರಿಂದ ಮಳೆ ಚುರುಕಾಗಲಿದ್ದು, ಇಲ್ಲಿಗೆ ಯೆಲ್ಲೋ ಅಲರ್ಟ್ ಕೊಡಲಾಗಿದೆ.

ನದಿಗಳು, ಜಲಾಶಯಗಳಲ್ಲಿ ನೀರಾಗುವ ಭರವಸೆ ಇದ್ದು, ಬಿತ್ತನೆ ಆರಂಭವಾಗುವ ಎಲ್ಲಾ ಲಕ್ಷಣಗಳು ಗೋಚರಿಸುತ್ತಿವೆ.

## ವಾಹನಗಳ ನಿಲುಗಡೆಗೆ ಸ್ಥಳ ನಿಗದಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಪುರಸಭಾ ವ್ಯಾಪ್ತಿಯಲ್ಲಿ ಪ್ರಮುಖ ರಸ್ತೆಗಳನ್ನು ಒಳಗೊಂಡಂತೆ ಸಂಚಾರ ದಟ್ಟಣೆ ಇರುವ ಹಾಗೂ ನಗರದ ಪ್ರಮುಖ ಸ್ಥಳಗಳಲ್ಲಿ ದ್ವಿಚಕ್ರ ಮತ್ತು ನಾಲ್ಕು ಚಕ್ರದ ವಾಹನಗಳ ನಿಲುಗಡೆಗೆ (ಪಾರ್ಕಿಂಗ್) ಸ್ಥಳ ನಗದಿ ಪಡಿಸಲಾಗಿದೆ.

**ದ್ವಿಚಕ್ರ ವಾಹನ ನಿಲುಗಡೆಗೆ ಸ್ಥಳದ ವಿವರ:** ಸುಹೀಲ್ ಮೆಡಿಕಲ್ ಮುಂಭಾಗ, ಕರ್ನಾಟಕ ಸಂಘ ಮುಂಭಾಗ, ಶಶಿ ಬ್ಯೂಟಿಕ್ ಮುಂಭಾಗ, ಹೊಸ ಬಸ್ ನಿಲ್ದಾಣದ ಹತ್ತಿರ, ಗಣಪ ಬೇಕರಿ ಮುಂಭಾಗ, ರುಕ್ಮಿಣಿ ಹಾಲ್ ಜ್ಯುವೆಲರಿಶಾಪ್ ಎದುರುಗಡೆ, ಬಿ ಎಂ ರಸ್ತೆ ಪ್ರಕೃತಿ ಮೆಡಿಕಲ್ ಶಾಪ್ ಹತ್ತಿರ ಬಿ.ಎಂ. ರಸ್ತೆ ಮೋರ್ ಸೂಪರ್ ಮಾರ್ಕೆಟ್ ಹತ್ತಿರ ದ್ವಿಚಕ್ರ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ.

**ನಾಲ್ಕು ಚಕ್ರದ ವಾಹನ ನಿಲುಗಡೆಗೆ ಸ್ಥಳದ ವಿವರ:** ಪುರಸಭಾ ಕಛೇರಿ ಮುಂಭಾಗ, ಬಿ.ಇ.ಒ ಕಛೇರಿ ಮುಂಭಾಗ, ನವೋದಯ ಸರ್ಕಲ್ ಎಡಭಾಗ, ಹೊಸಬಸ್ ನಿಲ್ದಾಣದ ಹತ್ತಿರ ದೀಪಕ್ ಹೋಮ್ ಅಪ್ಲೇಯನ್ಸ್ ಮುಂಭಾಗ, ಹೊಸಬಸ್ ನಿಲ್ದಾಣದ ಹತ್ತಿರ, ಹೊಸಬಸ್ ನಿಲ್ದಾಣದ ಬಲಭಾಗ, ವಾದಿರಾಜ್ ಕಾಂಡಿಮೆಂಟ್ಸ್ ಮುಂಭಾಗ ನಾಲ್ಕು ಚಕ್ರದ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಅವರು ಪ್ರಕಟಣೆಯಲ್ಲಿ ಮಾಹಿತಿ ತಿಳಿಸಿದ್ದಾರೆ.

## ಆ್ಯಂಬುಲೆನ್ಸ್ ಸೇವೆಗೆ ಸಂಸದ ಚಾಲನೆ



• ಪ್ರಜೋದಯ ವರದಿ

ಹಾಸನ: ನಗರದ 80 ಅಡಿ ರಸ್ತೆಯ ನೂತನ ಈದ್ಗಾ ಮೈದಾನದಲ್ಲಿ ಸಯ್ಯದ್ ಮುದಸ್ಸಿರ್ ಅವರ ನೇತೃತ್ವದಲ್ಲಿ ಮನ್ನತ್ ಆ್ಯಂಬುಲೆನ್ಸ್ ಸೇವೆಗೆ, ಆರೋಗ್ಯ ತಪಾಸಣಾ ಹಾಗು ರಕ್ತದಾನ ಶಿಬಿರಕ್ಕೆ ಸಂಸದ ಶ್ರೇಯಸ್ ಪಟೇಲ್ ಅವರು ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಸಮಾಜದ ಆರೋಗ್ಯ ಮತ್ತು ಮಾನವೀಯ ಸೇವೆಗೆ ಸಮರ್ಪಿತವಾದ ಇಂತಹ ಕಾರ್ಯಕ್ರಮಗಳು ಜನಸಾಮಾನ್ಯರ ಬದುಕಿನಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ತುರ್ತು ವೈದ್ಯಕೀಯ ಸೇವೆಗಳನ್ನು ಜನರಿಗೆ ತ್ವರಿತವಾಗಿ ತಲುಪಿಸುವ ನಿಟ್ಟಿನಲ್ಲಿ ಮನ್ನತ್ ಆ್ಯಂಬುಲೆನ್ಸ್ ಸರ್ವಿಸ್ ಕೈಗೊಂಡಿರುವ ಕಾರ್ಯ ಶ್ಲಾಘನೀಯವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾಂಗ್ರೆಸ್ ಮುಖಂಡ ಡಿ.ಪಿ. ಚಂದ್ರಶೇಖರ್, ಪತ್ರಕರ್ತ ರವಿ ನಕಲಗೂಡು, ಜನಪ್ರಿಯ ಆಸ್ಪತ್ರೆಯ ಮುಖ್ಯಸ್ಥ ಡಾ. ಬಶೀರ್, ನಗರ ಪಾಲಿಕೆ ಮಾಜಿ ಸದಸ್ಯ ಅಶು ಆಸೀಫ್, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ರಂಜಿತ್ ಗೊರೂರು ಉಪಸ್ಥಿತರಿದ್ದರು.

# ನಿಗದಿತ ಸ್ಥಳದಲ್ಲೇ ವ್ಯಾಪಾರಕ್ಕೆ ಅವಕಾಶ ನೀಡಿ

## ಪುರಸಭೆಗೆ ವ್ಯಾಪಾರಿಗಳ ಮನವಿ

• ಪ್ರಜೋದಯ ವರದಿ



**ಸಕಲೇಶಪುರ:** ಪಟ್ಟಣದಲ್ಲಿ ಕಳೆದ 30 35 ವರ್ಷಗಳಿಂದ ಆಹಾರ ಮತ್ತು ತಿಂಡಿ ವ್ಯಾಪಾರ ನಡೆಸಿ ಜೀವನ ಸಾಗಿಸುತ್ತಿರುವ ಬೀದಿಬದಿ ವ್ಯಾಪಾರಿಗಳು, ತಮಗೆ ಈಗಾಗಲೇ ನಿಗದಿ ಪಡಿಸಿರುವ ಸ್ಥಳದಲ್ಲೇ ಯಾವುದೇ ಅಡೆತಡೆಗಳಿಲ್ಲದೆ ವ್ಯಾಪಾರ ನಡೆಸಲು ಅವಕಾಶ ಕಲ್ಪಿಸುವಂತೆ ಪುರಸಭೆ ಮುಖ್ಯಾಧಿಕಾರಿ ಮಹೇಶ್ವರಪ್ಪ ಅವರಿಗೆ ಮನವಿ ಸಲ್ಲಿಸಿದರು.

ಇದೇ ವೇಳೆ ಮಾತನಾಡಿದ ವ್ಯಾಪಾರಿಗಳು, ತಮ್ಮ ಸಮಸ್ಯೆ ಕುರಿತು ಈ ಹಿಂದೆ ವಿವಿಧ ಹಂತಗಳಲ್ಲಿ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ಶಾಶ್ವತ ಪರಿಹಾರ ದೊರೆತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜಿಲ್ಲಾ ಮಟ್ಟದಲ್ಲಿ ನಡೆದ ಅಂಗಡಿ ಮುಂಗಟ್ಟು ತೆರವು ಕಾರ್ಯಾಚರಣೆಯ ಸಂದರ್ಭದಲ್ಲಿ ತಮ್ಮ ವ್ಯಾಪಾರ ಸ್ಥಳಗಳೂ ತೆರವುಗೊಂಡಿದ್ದವು. ಬಳಿಕ ಶಾಸಕ ಸಿಮೆಂಟ್ ಮಂಜು ಅವರ ಮಧ್ಯಸ್ಥಿಕೆಯಿಂದ ಪುರಸಭೆ ವತಿಯಿಂದ ತಾತ್ಕಾಲಿಕ ವ್ಯವಸ್ಥೆ ಕಲ್ಪಿಸಲಾಗಿತ್ತು ಎಂದು ತಿಳಿಸಿದರು.

ನಂತರ ಸಂಬಂಧಪಟ್ಟ ಅಧಿಕಾರಿಗಳು ಎಸ್‌ಬಿಐ ಬ್ಯಾಂಕ್ ಮುಂಭಾಗದಲ್ಲಿ ಆಹಾರ ಮಳಿಗೆ ನಡೆಸಲು ಸೂಕ್ತ ಸ್ಥಳವನ್ನು ನಿಗದಿಪಡಿಸಿದ್ದರು. ಆದರೆ ಕೆಲವು ವ್ಯಕ್ತಿಗಳು ಆ ಸ್ಥಳದಲ್ಲಿಯೂ ವ್ಯಾಪಾರ ನಡೆಸಲು ಅಡಚಣೆ ಉಂಟುಮಾಡುತ್ತಿದ್ದು, ತಕರಾರು ಸೃಷ್ಟಿಸುತ್ತಿದ್ದಾರೆ ಎಂದು ಅವರು ಆರೋಪಿಸಿದರು.

ಹಲವು ವರ್ಷಗಳಿಂದ ಇದೇ ವೃತ್ತಿಯನ್ನು ಅವಲಂಬಿಸಿ ಕುಟುಂಬ ನಿರ್ವಹಣೆ ಮಾಡುತ್ತಿರುವ ಹಿನ್ನೆಲೆಯಲ್ಲಿ, ನಮ್ಮ ಜೀವನೋಪಾಯಕ್ಕೆ ಯಾವುದೇ ಧಕ್ಕೆಯಾಗದಂತೆ ಆಡಳಿತ ತಕ್ಷಣ ಮಧ್ಯಪ್ರವೇಶಿಸಿ, ಈಗಾಗಲೇ ನಿಗದಿಪಡಿಸಿರುವ ಸ್ಥಳದಲ್ಲೇ ವ್ಯಾಪಾರ ನಡೆಸಲು ಅವಕಾಶ ಕಲ್ಪಿಸುವುದರ ಜೊತೆಗೆ ಶಾಶ್ವತ ಪರಿಹಾರ ಒದಗಿಸಬೇಕು ಎಂದು ಆಗ್ರಹಿಸಿದರು.

ಬೀದಿ ಬದಿ ವ್ಯಾಪಾರಿಗಳ ಹಿತಾಸಕ್ತಿಯನ್ನು ಕಾಪಾಡಿ, ನಮ್ಮ ಜೀವನೋಪಾಯಕ್ಕೆ ಯಾವುದೇ ರೀತಿಯ ತೊಂದರೆಯಾಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

# ಕೆ.ಎಂ.ಶಿ.ಗೆ ಸಚಿವ ಸ್ಥಾನ: ದೇವರಿಗೆ ಮೊರೆ

• ಪ್ರಜೋದಯ ವರದಿ



ಅರಸೀಕೆರೆ: ಸತತ ನಾಲ್ಕು ಬಾರಿ ಕ್ಷೇತ್ರದ ಶಾಸಕರಾಗಿ ದಾಖಲೆ ಮತದಿಂದ ಆಯ್ಕೆಯಾಗಿರುವ ಕೆ.ಎಂ. ಶಿವಲಿಂಗೇಗೌಡರಿಗೆ ಸಚಿವ ಸ್ಥಾನ ದೊರೆಯಲಿ ಎಂದು ತಾಲ್ಲೂಕು ವಾಲ್ಮೀಕಿ ಸಮಾಜದ ಮುಖಂಡರು ಸುಕ್ಷೇತ್ರ, ಯಾದಪುರದ ಜೇನುಕಲ್ಲು ಸಿದ್ದೇಶ್ವರ ಸ್ವಾಮಿಯ ಮೊರೆ ಹೋಗಿದ್ದಾರೆ.

ಟಿಎಪಿಸಿಎಂಎಸ್ ಸಹಕಾರ ಸಂಘದ ಅಧ್ಯಕ್ಷ ಕೆಲ್ಲಂಗೆರೆ ಕುಮಾರ್ ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾಜಿ ಅಧ್ಯಕ್ಷ ಬಾಯ್ಲರ್ ಕುಮಾರ್ ಅವರ ನೇತೃತ್ವದಲ್ಲಿ ಯಾದಾಪುರ ಸಿದ್ದೇಶ್ವರ ಸ್ವಾಮಿಯ ಸನ್ನಿಧಾನಕ್ಕೆ ಆಗಮಿಸಿದ ವಾಲ್ಮೀಕಿ ಸಮಾಜದ ನೂರಾರು ಬಂದುಗಳು ಜೇನುಕಲ್ ಸಿದ್ದೇಶ್ವರ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ ನಂತರ ಬೆಟ್ಟದ ಮೆಟ್ಟಿಲು ಬಳಿ ನೂರಾರು ಇಳುಗಾಯಿ ಹೊಡೆಯುವ ಮೂಲಕ ಶಿವಲಿಂಗೇಗೌಡರಿಗೆ ನೂತನ ಸರ್ಕಾರದಲ್ಲಿ ಮಂತ್ರಿ ಸ್ಥಾನ ದೊರೆಯಲಿ ಎಂದು ದೇವರಲ್ಲಿ ಮೊರೆ ಇಟ್ಟರು.

ಕೆಲ್ಲಂಗೆರೆ ಕುಮಾರ್ ಮಾತನಾಡಿ, ಶಿವಲಿಂಗೇಗೌಡರಲ್ಲಿರುವ ಜನಪರ ಚಿಂತನೆ ಅವರ ನಾಯಕತ್ವದ ಗುಣ ಇತರರಿಗೆ ಮಾದರಿಯಾಗಿದ್ದು ಈಗಾಗಲೇ ಅರಸೀಕೆರೆ ವಿಧಾನಸಭಾ ಕ್ಷೇತ್ರವನ್ನು ರಾಜ್ಯದಲ್ಲೇ ಮಾದರಿ ಕ್ಷೇತ್ರವನ್ನಾಗಿ ಅಭಿವೃದ್ಧಿಪಡಿಸಿದ್ದು ಅದೇ ರೀತಿ ಅವರಿಗೆ ಸಚಿವ ಸ್ಥಾನಮಾನ ಸಿಕ್ಕಿದರೆ ರಾಜ್ಯದ ಅಭಿವೃದ್ಧಿಗೆ ಅವರದ್ದೆಯಾದ ರೀತಿಯಲ್ಲಿ ವಿಶಿಷ್ಟ ಕೊಡುಗೆ ನೀಡುವುದರಲ್ಲಿ ಸಂದೇಹವಿಲ್ಲ. ಇದರಿಂದ ಪಕ್ಷದ ಬಲವರ್ಧನೆಗೂ ಸಹಕಾರಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಾಯ್ಲರ್ ಕುಮಾರ್ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಲೇ ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟದಲ್ಲಿ ಶಿವಲಿಂಗೇಗೌಡರು ಇರುತ್ತಾರೆ ಎಂಬುದು ಕ್ಷೇತ್ರದ ಜನತೆಯ ಆಸೆಯಾಗಿತ್ತು. ಆದರೆ ಶಿವಲಿಂಗೇಗೌಡ ಅವರಿಗೆ ಎರಡನೇ ಅವಧಿಯಲ್ಲಿ ಮಂತ್ರಿ ಮಾಡುವುದಾಗಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಪ್ರಸ್ತುತ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಭರವಸೆ ನೀಡಿದ್ದರು. ಈಗ ಅದನ್ನು ಈಡೇರಿಸುವ ಮೂಲಕ ಕ್ಷೇತ್ರದ ಜನತೆಯ ದಶಕಗಳ ಬೇಡಿಕೆಯನ್ನು ಈಡೇರಿಸಲಿ ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ವಾಲ್ಮೀಕಿ ಸಮಾಜದ ಕೊಟ್ರೇಶ್ ಕಲ್ಯಾಡಿ, ರೇಖಾ ಜಯಣ್ಣ, ಸತೀಶ್, ರಾಜಾ ನಾಯ್ಕ್, ಹರೀಶ್ ಉಪಸ್ಥಿತರಿದ್ದರು.

# ಮಾವು ಬೆಳೆಗಾರರಿಗೆ ಆರ್ಥಿಕ ನೆರವು

• ಪ್ರಜೋದಯ ವರದಿ



**ಹೊಸದಿಲ್ಲಿ/ಬೆಂಗಳೂರು:** ಬೆಲೆ ಕುಸಿತದಿಂದ ಕಂಗೆಟ್ಟಿರುವ ಕರ್ನಾಟಕದ ಮಾವು ಬೆಳೆಗಾರರಿಗೆ ಕೇಂದ್ರ ಸರ್ಕಾರ ಸಿಹಿ ಸುದ್ದಿ ನೀಡಿದೆ. ಮಾರುಕಟ್ಟೆ ಹಸ್ತಕ್ಷೇಪ ಯೋಜನೆಯಡಿ 1.30 ಲಕ್ಷ ಮೆಟ್ರಿಕ್ ಟನ್ ಮಾವಿಗೆ ಪ್ರತಿ ಕ್ವಿಂಟಲ್‌ಗೆ 1,750 ರೂ. ಆರ್ಥಿಕ ನೆರವು ಘೋಷಿಸಿದೆ.

ಹವಾಮಾನ ವೈಪರೀತ್ಯ, ಮಾರುಕಟ್ಟೆಯಲ್ಲಿ ಬೆಲೆ ಕುಸಿತದಿಂದಾಗಿ ರಾಜ್ಯದ ಬೆಳೆಗಾರರಿಗೆ ಮಾವು ಹುಳಿಯಾಗಿ ಪರಿಣಮಿಸಿದರೂ ಇದೀಗ ಕೇಂದ್ರ ಸರ್ಕಾರ ಘೋಷಿಸಿದ ಆರ್ಥಿಕ ನೆರವಿನಿಂದ ರಾಜ್ಯದ ಬೆಳೆಗಾರರು ತುಸು ನಿರಾಳರಾಗುವಂತಾಗಿದೆ.

ಕಳೆದ ಐದಾರು ದಿನಗಳ ಹಿಂದಷ್ಟೇ ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಅವರು ರಾಜ್ಯದ ಮಾವು ಬೆಳೆಗಾರರ ಸಂಕಷ್ಟದ ಬಗ್ಗೆ ಕೃಷಿ ಸಚಿವ ಶಿವರಾಜಸಿಂಗ್ ಚೌಹಾಣ್ ಅವರಿಗೆ ಪತ್ರ ಬರೆದು ಮನವರಿಕೆ ಮಾಡಿಕೊಟ್ಟಿದ್ದರು.

ಬೆಲೆ ಕೊರತೆ ಪಾವತಿ ಯೋಜನೆ (ಪಿಡಿಪಿಎಸ್) ಯಡಿ ನೆರವಾಗುವಂತೆ ಒತ್ತಾಯಿಸಿದ್ದರು. ಜೋಶಿ ಅವರ ಮನವಿಗೆ ಸ್ಪಂದಿಸಿದ ಕೇಂದ್ರ ಕೃಷಿ ಸಚಿವರು, ರಾಜ್ಯದ ಮಾವು ಬೆಳೆಗಾರರ ಸಂಕಷ್ಟಕ್ಕೆ ನೆರವಾಗುವಲ್ಲಿ ತ್ವರಿತ ಕ್ರಮ ಕೈಗೊಂಡಿದ್ದು, ಆರ್ಥಿಕ ನೆರವು ನೀಡಲು ಅನುಮೋದನೆ ನೀಡಿದ್ದರ ಬಗ್ಗೆ ಸಚಿವ ಪ್ರಲ್ಹಾದ ಜೋಶಿ ಅವರಿಗೂ ಪತ್ರ ಬರೆದು ಮಾಹಿತಿ ಹಂಚಿಕೊಂಡಿದ್ದಾರೆ.

ಕರ್ನಾಟಕದ ಮಾವು ಬೆಳೆಗಾರರ ಹಿತರಕ್ಷಣೆಗೆ ಮುಂದಾದ ಕೇಂದ್ರ ಸರ್ಕಾರ, ಮಾರುಕಟ್ಟೆ ಮಧ್ಯಸ್ಥಿಕೆ ಯೋಜನೆಯಡಿ ಬೆಲೆ ಕೊರತೆ ಪಾವತಿ ಅನುಷ್ಠಾನಕ್ಕೆ ಕ್ರಮ ಕೈಗೊಂಡಿದೆ. ಮಾರ್ಗಸೂಚಿಯಂತೆ 2026-27ರ ಮಾರುಕಟ್ಟೆ ಹಂಗಾಮಿನಲ್ಲಿ ಕರ್ನಾಟಕದಲ್ಲಿ ತೋತಾಪುರಿ ಮಾವಿಗೆ ಬೆಲೆ ಕೊರತೆ ಪಾವತಿಯನ್ನು ಜಾರಿಗೆ ತರಲು ನಿರ್ದೇಶಿಸಿದೆ. ಅಡಿಯಲ್ಲಿ ನೆರವು ಘೋಷಿಸಿರುವ ಕೇಂದ್ರ ಸರ್ಕಾರ, ಗರಿಷ್ಠ 1,30,000 ವರೆಗೆ ಅನ್ವಯಿಸುವಂತೆ ಪ್ರತಿ ಕ್ವಿಂಟಲ್‌ಗೆ 1,750 ರೂ. ಸಹಾಯಧನ ನಿಗದಿ ಪಡಿಸಿದ್ದು, ರಾಜ್ಯ ಸರ್ಕಾರಕ್ಕೆ ಮಾರ್ಗಸೂಚಿ ಹೊರಡಿಸಿದೆ.

2026-27 ರ ಹಂಗಾಮಿನಲ್ಲಿ ಒಂದು ತಿಂಗಳವರೆಗೆ ಬೆಲೆ ಕೊರತೆ ಪಾವತಿ ಅನುಷ್ಠಾನ ಜಾರಿಯಲ್ಲಿರುತ್ತದೆ ಎಂದು ಸೂಚಿಸಲಾಗಿದೆ.

## ಜೀವನದ ಗುರಿ ಕಳೆದುಕೊಂಡು ಅಪರಾಧ ಚಟುವಟಿಕೆಗಳತ್ತ ಆಕರ್ಷಿತ

# ಮಾದಕ ವ್ಯಸನಿಗಳು ಹೆಚ್ಚುತ್ತಿರುವುದು ಕಳವಳಕಾರಿ

• ಪ್ರಜೋದಯ ವರದಿ



**ಹಾಸನ:** ಮಾದಕ ವಸ್ತುಗಳ ವ್ಯಸನಕ್ಕೆ ಒಳಗಾದ ವ್ಯಕ್ತಿಯು ತನ್ನ ಜೀವನದ ಗುರಿಯನ್ನು ಕಳೆದುಕೊಳ್ಳುವುದರ ಜೊತೆಗೆ ಅಪರಾಧ ಚಟುವಟಿಕೆಗಳತ್ತ ಆಕರ್ಷಿತನಾಗುವ ಸಾಧ್ಯತೆ ಹೆಚ್ಚಿರುತ್ತದೆ ಎಂದು ಹಾಸನ ಉಪ ವಿಭಾಗದ ಪೊಲೀಸ್ ಅಧೀಕ್ಷಕ ಗಂಗಾಧರಪ್ಪ ಅವರು ತಿಳಿಸಿದರು.

ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಜಿಲ್ಲಾ ಶಾಖೆ ಹಾಸನ, ರಾಜೀವ್ ಆಯುರ್ವೇದ ಮಹಾವಿದ್ಯಾಲಯ ಹಾಸನ ಹಾಗೂ ಯುವ ರೆಡ್ ಕ್ರಾಸ್ ಘಟಕದ ಸಂಯುಕ್ತ ಆಶ್ರಯದಲ್ಲಿ ರೂಪಿಸಲಾಗಿದ್ದ ವಿಶ್ವ ಮಾದಕ ದ್ರವ್ಯ ನಿಷೇಧ ದಿನಾಚರಣೆ ಅಂಗವಾಗಿ ಗುರುವಾರ ಏರ್ಪಡಿಸಿದ್ದ ''ಮಾದಕ ವ್ಯಸನ ಮುಕ್ತ ಅರಿವು ಕಾರ್ಯಕ್ರಮ'' ಹಾಗೂ ''ಯುವ ರೆಡ್ ಕ್ರಾಸ್ ಘಟಕ ಉದ್ಘಾಟನಾ ಸಮಾರಂಭದಲ್ಲಿ ಉಪನ್ಯಾಸ ನೀಡಿದ ಅವರು, ಜಿಲ್ಲೆಯಲ್ಲಿ ಡ್ರಗ್ಸ್, ಗಾಂಜಾ, ಎಂ.ಡಿ.ಎಂ.ಎ ಸೇರಿದಂತೆ ವಿವಿಧ ಮಾದಕ ವಸ್ತುಗಳ ಬಳಕೆ ಹೆಚ್ಚುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ ಎಂದರು.

ಸಮಾಜದಲ್ಲಿ ಮಾದಕ ವ್ಯಸನ ನಿರ್ಮೂಲನೆಗೆ ಸಾರ್ವಜನಿಕರ ಸಹಕಾರ ಅತ್ಯಗತ್ಯವಾಗಿದೆ. ತಮ್ಮ ಸುತ್ತಮುತ್ತ ಮಾದಕ ವ್ಯಸನಕ್ಕೆ ಒಳಗಾದವರು ಕಂಡು ಬಂದಲ್ಲಿ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡುವ ಮೂಲಕ ಸಹಕರಿಸಬೇಕೆಂದು ಮನವಿ ಮಾಡಿದರಲ್ಲದೆ, ಪೊಲೀಸ್ ಇಲಾಖೆಯು ಮಾದಕ ವ್ಯಸನಿಗಳಿಗೆ ಸೂಕ್ತ ಚಿಕಿತ್ಸೆ ಹಾಗೂ ಪುನರ್ವಸತಿ ಒದಗಿಸಿ ಅವರನ್ನು ಮುಖ್ಯವಾಹಿನಿಗೆ ತರಲು ಸಿದ್ಧವಿದೆ ಎಂದು ಹೇಳಿದರು.

ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ ಹಾಸನದ ಸಭಾಪತಿ ಹೆಮ್ಮಿಗೆ ಮೋಹನ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮಾದಕ ವ್ಯಸನದ ದುಷ್ಪರಿಣಾಮಗಳು ಸಮಾಜದ ಮೇಲೆ ಗಂಭೀರ ಪರಿಣಾಮ ಬೀರುತ್ತಿದ್ದು, ವಿಶೇಷವಾಗಿ ಯುವಕರು ಮತ್ತು ಯುವತಿಯರು ವ್ಯಸನದ ಬಲೆಗೆ ಬೀಳುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದರು.

ವಿದ್ಯಾರ್ಥಿಗಳು ಉತ್ತಮ ಶಿಕ್ಷಣ, ಮೌಲ್ಯಯುತ ಜೀವನ ಹಾಗೂ ಸಮಾಜಮುಖಿ ಚಟುವಟಿಕೆಗಳತ್ತ ಹೆಚ್ಚಿನ ಗಮನ ಹರಿಸಿ ಸಮಾಜಕ್ಕೆ ಮಾದರಿಯಾಗಬೇಕು. ವಿದ್ಯಾರ್ಥಿಗಳಲ್ಲಿ ಮಾನವೀಯ ಸೇವಾ ಮನೋಭಾವ, ಸಾಮಾಜಿಕ ಜವಾಬ್ದಾರಿ ಹಾಗೂ ಆರೋಗ್ಯ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಯುವ ರೆಡ್ ಕ್ರಾಸ್ ಘಟಕವು ಮಹತ್ವದ ಪಾತ್ರ ವಹಿಸಲಿದೆ ಎಂದು ತಿಳಿಸಿದರು.

ರೆಡ್ ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ಡಾ. ಸಾವಿತ್ರಿ ಅವರು ಮಾತನಾಡಿ, ಮಾದಕ ವಸ್ತುಗಳ ಸೇವನೆಯಿಂದ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ದಾರಿ ತಪ್ಪುತ್ತಿದ್ದು, ಆರೋಗ್ಯ ಸಮಸ್ಯೆಗಳು, ಸಾಮಾಜಿಕ ಬದ್ಧತೆಯ ಕುಸಿತ, ಕುಟುಂಬದಲ್ಲಿ ಬೇಜಬ್ದಾರಿ ಹಾಗೂ ಮಾನವೀಯ ಮೌಲ್ಯಗಳ ನಿರ್ಲಕ್ಷ್ಯ, ಇಂತಹ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇಂತಹ ದುಶ್ಚಟಗಳನ್ನು ತೊರೆದು ಸದೃಢ ಹಾಗೂ ಸಮೃದ್ಧ ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಕೈಜೋಡಿಸಬೇಕೆಂದು ಅವರು ಮನವಿ ಮಾಡಿದರು.

ರಾಜೀವ ಆಯುರ್ವೇದ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಎಸ್.ಎ.ನಿತಿನ್ ಅವರು ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಹೆಚ್ಚಿನ ಸಮಯವನ್ನು ಶಿಕ್ಷಣ, ವ್ಯಕ್ತಿತ್ವ ವಿಕಸನ ಹಾಗೂ ರಾಷ್ಟ್ರ ನಿರ್ಮಾಣದ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು. ಉತ್ತಮ ನಾಗರಿಕರಾಗಿ ದೇಶದ ಪ್ರಗತಿಗೆ ಕೊಡುಗೆ ನೀಡುವುದು ಪ್ರತಿಯೊಬ್ಬ ವಿದ್ಯಾರ್ಥಿಯ ಜವಾಬ್ದಾರಿಯಾಗಿದೆ ಎಂದರು.

ರೆಡ್‌ಕ್ರಾಸ್ ಸಂಸ್ಥೆಯ ಶಬ್ಬೀರ್ ಅಹ್ಮದ್, ಜಯೇಂದ್ರಕುಮಾರ್, ಎಸ್.ಎಸ್.ಪಾಷಾ, ಬಿ.ಆರ್.ಉದಯ್ ಕುಮಾರ್, ಕೆ.ಟಿ.ಜಯಶ್ರೀ, ಸುರೇಶ್, ಕಾಲೇಜಿನ ಅಧ್ಯಾಪಕಿ ಡಾ.ಚೈತ್ರ, ಹಾಗೂ ಸಿಬ್ಬಂದಿ ಹಾಜರಿದ್ದರು.

## ವೆನೆಜುವೆಲಾ ಜನರ ಬದುಕು ಕಸಿದ ಭೂಕಂಪ




• ಪ್ರಜೋದಯ ವರದಿ

ಕ್ಯಾರಕಾಸ್: ವೆನೆಜುವೆಲಾದ ರಾಜಧಾನಿ ಕ್ಯಾರಕಾಸ್‌ನ ಪಶ್ಚಿಮದಲ್ಲಿ ಎರಡು ಪ್ರಬಲ ಭೂಕಂಪಗಳು ಸಂಭವಿಸಿದ್ದು, ಕಟ್ಟಡ ಕುಸಿತ ಮತ್ತು ಮೂಲಸೌಕರ್ಯಗಳಿಗೆ ಭಾರಿ ಹಾನಿಯಾಗಿದೆಯಲ್ಲದೆ ಸಾವಿರಾರು ಜನರು ಮೃತಪಟ್ಟಿದ್ದು, ಲಕ್ಷಾಂತರ ಜನರು ಮನೆ ಮಠ ಕಳೆದುಕೊಂಡಿದ್ದಾರೆ ಎನ್ನಲಾಗಿದೆ.

ದಕ್ಷಿಣ ಅಮೆರಿಕದ ಈ ಪುಟ್ಟ ದೇಶದಲ್ಲಿ ಮತ್ತೆ ಭಾರೀ ಸಾವು-ನೋವುಗಳು ಮತ್ತು ವ್ಯಾಪಕ ವಿನಾಶದ ಬಗ್ಗೆ ವಿಜ್ಞಾನಿಗಳು ಎಚ್ಚರಿಕೆ ನೀಡಿದ್ದಾರೆ. ಗಂಭೀರ ಭೂಕಂಪಗಳಲ್ಲಿ ಸದ್ಯ 350 ಜನರು ಪ್ರಾಣ ಕಳೆದುಕೊಂಡಿದ್ದು, 15000ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ವೆನೆಜುವೆಲಾ ಮಧ್ಯಂತರ ನಾಯಕಿ ಡೆಲ್ಸಿ ರೊಡ್ರಿಗಸ್ ಅವರು ರಾಷ್ಟ್ರೀಯ ತುರ್ತು ಪರಿಸ್ಥಿತಿ ಘೋಷಿಸಿದ್ದು, ರಕ್ಷಣಾ ಕಾರ್ಯಾಚರಣೆಗಳಿಗೆ ಆದೇಶ ಹೊರಡಿಸಿದ್ದಾರೆ. ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸುವುದು ಸರ್ಕಾರದ ಪ್ರಾಥಮಿಕ ಆದ್ಯತೆ ಎಂದು ರೊಡ್ರಿಗಸ್ ಹೇಳಿದ್ದಾರೆ. ವೆನೆಜುವೆಲಾ ಸರಣಿ ಭೂಕಂಪ ಸಾವಿರಾರು ಜನರ ಬದುಕನ್ನೇ ಕಸಿದುಕೊಂಡಿದೆ.

ಕ್ಯಾರಕಾಸ್‌ನ ಪಶ್ಚಿಮಕ್ಕೆ ಸುಮಾರು 160 ಕಿ.ಮೀ (100 ಮೈಲುಗಳು) ದೂರದಲ್ಲಿ, 7.2 ತೀವ್ರತೆಯ ಮೊದಲ ಭೂಕಂಪನ ಸಂಭವಿಸಿದ್ದರೆ, ಒಂದು ನಿಮಿಷಕ್ಕಿಂತ ಕಡಿಮೆ ಅವಧಿಯಲ್ಲಿ 7.5 ತೀವ್ರತೆಯ ಮತ್ತೊಂದು ಕಂಪನ ಸಂಭವಿಸಿದೆ. ಎರಡು ಪ್ರಬಲ ಭೂಕಂಪಗಳ ನಂತರ 20ಕ್ಕೂ ಹೆಚ್ಚು ಉಪಕಂಪನಗಳನ್ನೂ ಕೂಡ ಪತ್ತೆ ಮಾಡಲಾಗಿದೆ.

ಲಾ ಗೈರಾದಲ್ಲಿ ಡಜನ್‌ಗಟ್ಟಲೇ ಕಟ್ಟಡಗಳು ಕುಸಿದಿದ್ದು, ಹೆಚ್ಚಿನ ಸಾವು- ನೋವುಗಳು ಮತ್ತು ವ್ಯಾಪಕ ಹಾನಿ ಸಂಭವಿಸಬಹುದಾಗಿದ್ದು, ವಿಪತ್ತು ಮರುಕಳಿಸುವ ಸಾಧ್ಯತೆಯಿದೆ ಎಂದು ಯುಎಸ್‌ಜಿಎಸ್ ಹೇಳಿದೆ.

ಆರಂಭದಲ್ಲಿ ಸಾವಿನ ಸಂಖ್ಯೆ 10,000 ದಿಂದ 100,000ವರೆಗೆ ಇರಬಹುದು ಎಂದು ಅಂದಾಜಿಸಲಾಗಿದೆ.

## ಗುಡ್ಡೇನಹಳ್ಳಿಯ ನಿವಾಸಿಗಳಿಗೆ ಕಲುಷಿತ ನೀರೇ ಗತಿ

» **ಮೊದಲನೇ ಪುಟದಿಂದ** ಮಾಡದಿರುವ ಪರಿಣಾಮ ಸೊಳ್ಳೆ ಗಳು ಹೆಚ್ಚಾಗಿ ಸಾಂಕ್ರಾಮಿಕ ರೋಗ ಭೀತಿಯು ನಿವಾಸಿಗಳನ್ನು ಕಾಡುತ್ತಿದೆ.

**ಸದಸ್ಯರಿಲ್ಲ-ಅಧಿಕಾರಿಗಳಿಗೆ ಕಿವಿ ಇಲ್ಲ:** ಹಾಸನ ಮಹಾನಗರ ಪಾಲಿಕೆಗೆ ಸದ್ಯ ಚುನಾಯಿತ ಪ್ರತಿನಿಧಿಗಳಿಲ್ಲ. ವಾರ್ಡ್ ಸದಸ್ಯರು ಇದ್ದಿದ್ದರೆ ಅವರನ್ನು ಕರೆದು ಸಮಸ್ಯೆ ಹೇಳಬಹು ದಿತ್ತು. ಬಡಾವಣೆಯ ನಿವಾಸಿಗಳೇ ಅನೇಕ ಬಾರಿ ಪಾಲಿಕೆಗೆ ಭೇಟಿ ನೀಡಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಬಡ ವರು, ಅನಕ್ಷರಸ್ಥರೇ ಹೆಚ್ಚಿರುವ ಇಲ್ಲಿನ ವರ ಸಮಸ್ಯೆಗೆ ಪರಿಹಾರ ಕಲ್ಪಿ ಸಲು ಯಾರೂ ಇಲ್ಲವಾಗಿದ್ದರೆಂದು ಸ್ಥಳೀಯರುಅಸಹಾಯಕತೆ ವ್ಯಕ್ತಪಡಿಸಿದರು.

## ನಾಳೆ ನಗರದಲ್ಲಿ ಕೆಂಪೇಗೌಡರ ಜಯಂತಿ: ಸಕಲ ಸಿದ್ಧತೆ

» **ಮೊದಲನೇ ಪುಟದಿಂದ**

ಕೆಂಪೇಗೌಡ ಜಯಂತಿಯಂದು ಬಡ ಪ್ರತಿಭಾವಂತ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಆರ್ಥಿಕ ನೆರವು ನೀಡಲು ನಿಧಿ ಸಂಗ್ರಹಿಸಲು ಸ್ವಾಮೀಜಿ ಸಲಹೆ ನೀಡಿ ದ್ದಾರೆ. ಆ ನಿಟ್ಟಿನಲ್ಲಿ ಕ್ರಮ ಕೈಗೊಳ್ಳ ಲಾಗಿದೆ. ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರ ಪುತ್ಥಳಿ ನಿರ್ಮಾಣ ಮಾಡುವ ಸಂಬಂಧ ಚರ್ಚೆ ನಡೆದಿದೆ. ಈ ಬಗ್ಗೆ ಮತ್ತೊಮ್ಮೆ ಸ್ವಾಮೀಜಿ ಸೇರಿ ಎಲ್ಲರ ಗಮನಕ್ಕೆ ತಂದು ಚರ್ಚಿಸುವು ದಾಗಿ ಹೇಳಿದರು.

ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಎಸ್.ಎಸ್.ರಘುಗೌಡ ಅವರು ಮಾತನಾಡಿ, ಶನಿವಾರ ಬೆಳಿಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿ ಕಚೇರಿಯಿಂದ ಕಲಾಕ್ಷೇತ್ರದವರೆಗೆ 20 ಕಲಾತಂಡ ಗಳನ್ನು ಒಳಗೊಂಡ ಭವ್ಯ ಮೆರವಣಿಗೆ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಜಿ.ಎಲ್.ಮುದ್ದೇಗೌಡ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಹಾಜರಿದ್ದರು.

## ಜಿಲ್ಲೆಯಲ್ಲಿ ಮುಂಗಾರು ಕ್ಷೀಣ: ಪರ್ಯಾಯ ಬೆಳೆ ಅನಿವಾರ್ಯ

» **ಮೊದಲನೇ ಪುಟದಿಂದ**

ಬಳಕೆ, ಅಂತರ ಬೇಸಾಯ ಮತ್ತು ಕಡಿಮೆ ಅವಧಿಯ ಬೆಳೆಗಳ ಆಯ್ಕೆ ಮೂಲಕ ನಷ್ಟವನ್ನು ತಗ್ಗಿಸಬಹುದಾಗಿದೆ. ಕೃಷಿ ಇಲಾಖೆಯ ಅಧಿಕಾರಿಗಳ ಪ್ರಕಾರ, ಹವಾಮಾನ ವೈಪರೀತ್ಯ ಎದುರಿಸಲು ರೈತರು ಬೆಳೆ ವೈವಿಧ್ಯೀಕರಣ ಮತ್ತು ಕೃಷಿಯಲ್ಲಿ ತಾಂತ್ರಿಕತೆ ಅಳವಡಿಸಿಕೊಳ್ಳಬೇಕಿದೆ. ಮಣ್ಣಿನಲ್ಲಿ ತೇವಾಂಶ ಹಿಡಿದಿಟ್ಟುಕೊಳ್ಳುವ ಬೆಳೆಗಳನ್ನು ಬೆಳೆಯಬೇಕಿದೆ. ಮಳೆಯಾದರೆ ಮಾತ್ರ ಬಿತ್ತನೆ ಮಾಡಲುಸಾಧ್ಯ. ಇಲ್ಲದಿದ್ದರೆ ಪರ್ಯಾಯ ಬೆಳೆಗಳತ್ತ ಹೋಗುವುದು ಅನಿವಾರ್ಯ. ಮುಂಗಾರು ಮಳೆ ಕೊರತೆಯ ಆತಂಕದ ನಡುವೆ ರೈತರು ಆಕಾಶದತ್ತ ಚಿತ್ತ ನೆಟ್ಟಿದ್ದು, ಕೃಷಿ ಇಲಾಖೆ ನೀಡಿರುವ ಪರ್ಯಾಯ ಬೆಳೆ ಸಲಹೆಗಳು ಈ ಬಾರಿಯ ಕೃಷಿ ಹಂಗಾಮಿನಲ್ಲಿ ಅನುಸರಿಸಬೇಕಾಗಿದೆ.

# 72 ಸಾವಿರ ಹುದ್ದೆ ಭರ್ತಿಗೆ ಸರ್ಕಾರ ಆದೇಶ

### 6 ತಿಂಗಳಲ್ಲಿ ಪ್ರಕ್ರಿಯೆ ಪೂರ್ಣಗೊಳಿಸುವ ವಾಗ್ದಾನ | ಆರ್ಥಿಕ ಇಲಾಖೆ ಅನುಮೋದನೆ

• ಪ್ರಜೋದಯ ವರದಿ



**ಬೆಂಗಳೂರು:** ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಬೃಹತ್ ಪ್ರಮಾಣದ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದೆ.

ಒಟ್ಟು 72,186 ಹುದ್ದೆಗಳನ್ನು ವೇಗವಾಗಿ ಮತ್ತು ಪಾರದರ್ಶಕವಾಗಿ ಭರ್ತಿ ಮಾಡಲು ಸರ್ಕಾರ ಅಧಿಕೃತ ಆದೇಶ ಹೊರಡಿಸಿದೆ. ಈ ನೇಮಕಾತಿ ಪ್ರಕ್ರಿಯೆಯನ್ನು ಕಾಲಮಿತಿಯಲ್ಲಿ ಮುಗಿಸಲು ಸರ್ಕಾರವು ಉನ್ನತ ಮಟ್ಟದ ಅಧಿಕಾರಿಗಳಿಗೆ ಜವಾಬ್ದಾರಿ ಹಂಚಿಕೆ ಮಾಡಿದೆ. ಸರ್ಕಾರದ ಆದೇಶದ ಪ್ರಕಾರ ಒಟ್ಟು 72,186 ಹುದ್ದೆಗಳ ಪೈಕಿ 2023–24ನೇ ಸಾಲಿನ ಹುದ್ದೆಗಳು ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 40,009 ಹುದ್ದೆಗಳ ಭರ್ತಿಗೆ ಈಗಾಗಲೇ ಆರ್ಥಿಕ ಇಲಾಖೆಯು ಸಹಮತಿ ನೀಡಿದೆ.

ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ಅಡಿಯಲ್ಲಿ ಖಾಲಿ ಇರುವ 32,177 ಹುದ್ದೆಗಳ ಪೈಕಿ ಶೇ.80ರಷ್ಟು (ಸುಮಾರು 26,000) ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆ ಅನುಮೋದನೆ ನೀಡಿದೆ.

**ನೇಮಕಾತಿಗೆ 2-4-6 ಸೂತ್ರ**

ನೇಮಕಾತಿ ಪ್ರಕ್ರಿಯೆಯನ್ನು ವಿಳಂಬ ಮಾಡದೆ ಪೂರ್ಣಗೊಳಿಸಲು ಸರ್ಕಾರವು 2 ತಿಂಗಳು, 4 ತಿಂಗಳು, 6 ತಿಂಗಳ ಕಾಲಮಿತಿಯನ್ನು ನಿಗದಿಪಡಿಸಿದೆ. ಮುಂದಿನ 2 ತಿಂಗಳು ನೇಮಕಾತಿ ಅಧಿಸೂಚನೆ ಹೊರಡಿಸುವುದು. 4 ತಿಂಗಳಲ್ಲಿ ನೇಮಕಾತಿ ಪರೀಕ್ಷೆಗಳನ್ನು ನಡೆಸುವುದು. ನಂತರ ಮುಂದಿನ 6 ತಿಂಗಳಲ್ಲಿ ಸಂಪೂರ್ಣ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಆದೇಶ ನೀಡುವುದು.

**ಮೇಲ್ವಿಚಾರಣೆಯ ಜವಾಬ್ದಾರಿ**

ಈ ನೇಮಕಾತಿ ಪ್ರಕ್ರಿಯೆಯನ್ನು ತ್ವರಿತಗತಿಯಲ್ಲಿ ನಡೆಸಲು ಇಬ್ಬರು ಉನ್ನತ ಮಟ್ಟದ ಅಧಿಕಾರಿಗಳಿಗೆ ಉಸ್ತುವಾರಿ ನೀಡಲಾಗಿದೆ. ಅಪರ ಮುಖ್ಯ ಕಾರ್ಯದರ್ಶಿ ಹಾಗು ಅಭಿವೃದ್ಧಿ ಆಯುಕ್ತರಿಗೆ ಇಲಾಖೆಗಳ ನೇರ ನೇಮಕಾತಿಯ ಉಸ್ತುವಾರಿ ವಹಿಸಲಿದ್ದಾರೆ. ಪ್ರಮುಖವಾಗಿ ಕೃಷಿ, ತೋಟಗಾರಿಕೆ, ರೇಷ್ಮೆ, ಪಶುಸಂಗೋ ಪನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳು ಇವೆ.

**ಯಾವೆಲ್ಲಾ ಇಲಾಖೆಯಲ್ಲಿ ನೇಮಕಾತಿ**

ಕೃಷಿ, ಪಶುಸಂಗೋಪನೆ, ಗ್ರಾಮೀಣಾಭಿವೃದ್ಧಿ, ತೋಟಗಾರಿಕೆ, ರೇಷ್ಮೆ, ಸಣ್ಣ ಮತ್ತು ಭಾರೀ ನೀರಾವರಿ, ಮೀನುಗಾರಿಕೆ, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ, ಅರಣ್ಯ, ಕಂದಾಯ, ಆರ್ಥಿಕ, ಆಹಾರ ಮತ್ತು ನಾಗರಿಕ ಸರಬರಾಜು, ಕೈಮಗ್ಗ ಮತ್ತು ಜವಳಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ, ಆರೋಗ್ಯ, ಉನ್ನತ ಶಿಕ್ಷಣ, ಗೃಹ, ವಸತಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ, ಮಾಹಿತಿ ತಂತ್ರಜ್ಞಾನ, ಕನ್ನಡ ಮತ್ತು ಸಂಸ್ಕೃತಿ, ಪ್ರವಾಸೋದ್ಯಮ ಮತ್ತು ಇತರೆ ಪ್ರಮುಖ ಇಲಾಖೆಗಳು.

ದೀರ್ಘಕಾಲದಿಂದ ಸರ್ಕಾರಿ ಉದ್ಯೋಗಕ್ಕಾಗಿ ಕಾಯುತ್ತಿದ್ದ ಅಭ್ಯರ್ಥಿಗಳಿಗೆ ಇದು ದೊಡ್ಡ ಸಮಾಧಾನ ತಂದಿದೆ.

ಕೇವಲ 6 ತಿಂಗಳ ಒಳಗಾಗಿ ಬೃಹತ್ ಸಂಖ್ಯೆಯ ಹುದ್ದೆಗಳನ್ನು ಭರ್ತಿ ಮಾಡುತ್ತಿರುವುದು ರಾಜ್ಯ ಸರ್ಕಾರದ ಮಹತ್ವದ ಹೆಜ್ಜೆಯಾಗಿದೆ. ಈ ಆದೇಶದನ್ವಯ ಇಲಾಖೆಗಳು ಶೀಘ್ರದಲ್ಲೇ ಅಧಿಕೃತ ಅಧಿಸೂಚನೆಗಳನ್ನು ಹೊರಡಿಸಲಿವೆ.

## ರೈತರ ಹಿತರಕ್ಷಣೆಗೆ ಮೂರು ರಾಜ್ಯಗಳು ಬದ್ಧ

» **ಮೊದಲನೇ ಪುಟದಿಂದ**

ಮಂತ್ರಿಗಳು ಸಮರ್ಪಕವಾಗಿ ತುಂಗಭದ್ರಾ ನದಿ ನೀರು ಬಳಕೆ ಮಾಡಿಕೊಳ್ಳಲು ಒಪ್ಪಿಕೊಂಡಿದ್ದಾರೆ. ಇದರ ಬಗ್ಗೆ ವಿವರವಾದ ಯೋಜನೆ ರೂಪಿಸಿಕೊಂಡು ಕೇಂದ್ರದ ಬಳಿ ಬರಲು ಒಪ್ಪಿದ್ದಾರೆಂದು ಕೇಂದ್ರ ಜಲಶಕ್ತಿ ಖಾತೆ ಸಚಿವ ಸಿ.ಆರ್.ಪಾಟೀಲ್ ಅವರು ಹೇಳಿದರು.

ನದಿ ಜೋಡಣೆ ಮಾಡಬೇಕೆನ್ನುವ ಕೇಂದ್ರದ ಸಂಕಲ್ಪಕ್ಕೆ ಇದು ಬಲ ಕೊಡುವ ವಿಷಯವಾಗಿದೆ. ದೇಶದ ಬಹುತೇಕ ಜಲಾಶಯಗಳಲ್ಲಿ ಹೂಳು ತುಂಬಿದ್ದು, ಅದನ್ನು ತೆಗೆಯಲು ಯೋಜನೆ ರೂಪಿಸಿದರೆ ಶೇ.25 ರಿಂದ 30ರಷ್ಟು ಜನರಿಗೆ ಬಳಕೆಗೆ ನೀರು ಕೊಡಲು ಸಾಧ್ಯವಾಗುತ್ತದೆಂದರು.

ದೇಶದಾದ್ಯಂತ ಇರುವ ಬಹುತೇಕ ಅಣೆಕಟ್ಟೆಗಳಲ್ಲಿ ಶೇ.15ಕ್ಕಿಂತಲೂ ಹೆಚ್ಚು ಹೂಳು ತುಂಬಿಕೊಂಡಿದ್ದು, ಇದರಿಂದ ಜಲಾಶಯಗಳ ನೀರು ಸಂಗ್ರಹಣಾ ಸಾಮರ್ಥ್ಯ ಗಣನೀಯವಾಗಿ ಕುಸಿದಿದೆ. ಈ ಸಮಸ್ಯೆಯನ್ನು ಮನಗಂಡು ದೇಶದ ಅಣೆಕಟ್ಟುಗಳಿಂದ ಹೂಳು ತೆಗೆಯುವ ಬೃಹತ್ ಯೋಜನೆಯೊಂದನ್ನು ಕೇಂದ್ರ ಸರ್ಕಾರ ಸಿದ್ಧಪಡಿಸುತ್ತಿದೆ. ತುಂಗಭದ್ರಾ ಜಲಾಶಯದಲ್ಲೂ ಹೂಳು ತುಂಬಿಕೊಂಡಿದ್ದು, ತೆಗೆಯಲು ವಿಶೇಷ ಯೋಜನೆಯನ್ನು ರೂಪಿಸುತ್ತಿದ್ದೇವೆ. ಈ ಯೋಜನೆಯ ತಾಂತ್ರಿಕ ಸಹಯೋಗವನ್ನು ಕೇಂದ್ರ ಸರ್ಕಾರ ನೀಡಲಿದ್ದು, ಅನುಷ್ಠಾನದ ಜವಾಬ್ದಾರಿಯನ್ನು ಆಯಾ ರಾಜ್ಯ ಸರ್ಕಾರಗಳು ಹೊರಬೇಕಾಗುತ್ತದೆ. ಈ ಯೋಜನೆ ಯಶಸ್ವಿಯಾದರೆ ತುಂಗಭದ್ರಾ ಜಲಾಶಯದ ನೀರು ಸಂಗ್ರಹಣಾ ಸಾಮರ್ಥ್ಯವನ್ನು ಶೇ.25 ರಿಂದ 30ರಷ್ಟು ಹೆಚ್ಚಿಸಬಹುದಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

## ಭೂಮಿ ಉಳಿಸಿಕೊಡಲು ವೃದ್ಧರ ಮನವಿ

• ಪ್ರಜೋದಯ ವರದಿ



**ಹಾಸನ:** ಮೃತರ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ ಜಮೀನು ಖಾತೆ ಮಾಡಿಕೊಂಡಿದ್ದು ತಮಗೆ ನ್ಯಾಯ ದೊರಕಿಸಿಕೊಡಬೇಕೆಂದು ತಾಲ್ಲೂಕಿನ ಕಾಳತಮ್ಮನಹಳ್ಳಿಯ ಕೃಷ್ಣಮೂರ್ತಿ ಮತ್ತು ಸತ್ಯನಾರಾಯಣ ಅವರು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 2005ರಲ್ಲಿ ನಮ್ಮ ಭಾವ ಸಿ.ಎನ್.ಬಲರಾಮಸ್ವಾಮಿ ಮೃತಪಟ್ಟಿದ್ದಾರೆ. ಅವರಿಗೆ ಮಕ್ಕಳು ಇರಲಿಲ್ಲ. ಸರ್ವೆ ನಂ.9/4ರಲ್ಲಿ ಅವರಿಗೆ 1 ಎಕರೆ 2 ಗುಂಟೆ ಜಮೀನು ಇತ್ತು. ಬಲರಾಮಸ್ವಾಮಿ ಅವರ ನಿಧನಾನಂತರ ಜಮೀನನ್ನು ಸತ್ಯ ಎಂಬುವವರಿಗೆ ವಾರಕ್ಕೆ ನೀಡಿದ್ದೇವು. ಆದರೆ 2024 ಜು.12ರಂದು ಗ್ರಾಮದ ಶಿವರಾಜ್‌ಕುಮಾರ್ ಎಂಬಾತ ಮೃತರಾಗಿರುವ ಬಲರಾಮಸ್ವಾಮಿ ಅವರ ಹೆಸರಿನಲ್ಲಿ ನಕಲಿ ಆಧಾರ್ ಕಾರ್ಡ್ ಸೃಷ್ಟಿಸಿ ಆತನ ಹೆಸರಿಗೆ ಜಮೀನು ಕ್ರಯ ಮಾಡಿಕೊಂಡಿದ್ದಾನೆ. 2005ರಲ್ಲಿ ಮೃತ ಪಟ್ಟ ಬಲರಾಮಸ್ವಾಮಿ ಅವರು 2024 ರಲ್ಲಿ ಅವರಿಗೆ ಮಾರಾಟ ಮಾಡಲು ಹೇಗೆ ಸಾಧ್ಯವೆಂದು ಪ್ರಶ್ನಿಸಿದರು.

ಈ ಬಗ್ಗೆ ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿ, ಉಪ ನೋಂದಣಾಧಿಕಾರಿಗೆ ದೂರು ನೀಡಿದ್ದರೂ ಯಾವ ಪ್ರಯೋಜನವಾಗಿಲ್ಲ. ಒಂದು ವರ್ಷದಿಂದ ಶಿವರಾಜಕುಮಾರ್ ನಮ್ಮ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾನೆ. ಜಮೀನು ವ್ಯಾಜ್ಯ ಕುರಿತು ನ್ಯಾಯಾ ಲಯದಲ್ಲಿ ವಿಚಾರಣೆ ನಡೆಯುತ್ತಿದೆ. ಆತನ ಕಿರುಕುಳ ಸಹಿಸಲು ಆಗುತ್ತಿಲ್ಲ. ತಮಗೆ ರಕ್ಷಣೆ ಹಾಗು ಜಮೀನು ಉಳಿಸಿಕೊಡಬೇಕೆಂದು ಒತ್ತಾಯಿಸಿದರು.

## ಜೂ. 29 ರಿಂದ ಮಕ್ಕಳಿಗೆ ಬಸ್ ಪಾಸ್ ಲಭ್ಯ

• ಪ್ರಜೋದಯ ವರದಿ

**ಬೆಂಗಳೂರು:** ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಘೋಷಿಸಿದ ರಾಜ್ಯದ ಎಲ್ಲಾ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಯೋಜನೆಯೂ ಶೀಘ್ರದಲ್ಲಿ ಮಕ್ಕಳಿಗೆ ನೆರವಾಗಲಿದೆ.

ಜೂ.29 ರಿಂದ ಸೇವಾ ಸಿಂಧು ಪೋರ್ಟಲ್ ಮೂಲಕ ಪಾಸ್ ಪಡೆಯಬಹುದು. ಸರ್ಕಾರವು ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಪ್ರಯಾಣಿಸುವ ರಾಜ್ಯದ ಶಾಲಾ ಕಾಲೇಜು ಗಳಲ್ಲಿನ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ವಿತರಿಸಲು ಹಾಗು ಈಗಾಗಲೇ ಶುಲ್ಕ ಪಾವತಿಸಿಕೊಂಡು ವಿತರಿಸಿರುವ, ವಿದ್ಯಾರ್ಥಿ ಬಸ್ ಪಾಸ್‌ನ ಮೊತ್ತವನ್ನು ಮರು-ಪಾವತಿಸಲು ಅನುಮೋದನೆ ನೀಡಿ ಆದೇಶಿಸಿದೆ.

## ವಾಸದ ಮನೆ ಧ್ವಂಸ ಪ್ರಕರಣ: ಎಫ್‌ಐಆರ್ ದಾಖಲು



• ಪ್ರಜೋದಯ ವರದಿ

**ಸಕಲೇಶಪುರ:** ವಾಸದ ಮನೆಯನ್ನು ಧ್ವಂಸಗೊಳಿಸಿದ ಪ್ರಕರಣ ಸಂಬಂಧ ಐವರ ವಿರುದ್ಧ ಯಸಳೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಾಲ್ಲೂಕಿನ ಹೆತ್ತೂರು ಹೋಬಳಿ ಬ್ಯಾಗಡಹಳ್ಳಿ ಗ್ರಾಮದ ಪ್ರದೀಪ್ ಕುಮಾರ್ ಎಂಬುವ ವರಿಗೆ ಸೇರಿದ ಮನೆಯನ್ನು ಕಿಡಿಗೇಡಿಗಳು ಹಾನಿ ಮಾಡಿದ್ದರು. ಬ್ಯಾಗಡಹಳ್ಳಿಯ ಸಂಪತ್ ಕುಮಾರ್, ಪ್ರೇಮ್ ಕುಮಾರ್, ಸುರೇಶ್, ನಿಶಾಂತ್ ಹಾಗು ಸಚಿನ್ ವಿರುದ್ಧ ದೂರು ದಾಖಲಿಸಲಾಗಿದೆ.

ಪ್ರದೀಪ್ ಕುಮಾರ್ ಗ್ರಾಮದ ಸರ್ವೆ ನಂ.50ರಲ್ಲಿ ಕೆ.ಜಿ.ವೆಂಕಟೇಶ್ ಅವರಿಂದ 15 ವರ್ಷಗಳ ಹಿಂದೆ 2 ಗುಂಟೆ ಜಮೀನನ್ನು ಮನೆ ನಿರ್ಮಾಣ ಉದ್ದೇಶದಿಂದ ಖರೀದಿಸಿದ್ದರು. ಅದೇ ಸರ್ವೆ ನಂಬರ್‌ನಲ್ಲಿ ಕೃಷ್ಣಸ್ವಾಮಿ ಕುಮ್ಮಳ್ಳಿ ಹಾಗು ಕೆ.ಜಿ. ವೆಂಕಟೇಶ್ ಅವರ 10 ಗುಂಟೆ ಜಮೀನಿದ್ದು, ಕಂದಾಯ ಇಲಾಖೆಯಿಂದ ಮಂಜೂರಾಗಿ 35 ವರ್ಷಗಳಿಗೂ ಹೆಚ್ಚು ಕಾಲ ಅನುಭವದಲ್ಲಿದ್ದಾರೆಂದು ತಿಳಿದುಬಂದಿದೆ.

ಎರಡು ವರ್ಷಗಳ ಹಿಂದೆ ಪ್ರದೀಪ್ ಕುಮಾರ್ ಅವರು ಗ್ರಾಮ ಪಂಚಾಯಿತಿಯಿಂದ ಅಗತ್ಯ ದಾಖಲೆಗಳನ್ನು ಸಲ್ಲಿಸಿ ಅನುಮತಿ ಪಡೆದು ವಾಸದ ಮನೆ ನಿರ್ಮಿಸಿಕೊಂಡಿದ್ದರು.

ಇತ್ತೀಚೆಗೆ ತಾಯಿಯ ಆರೋಗ್ಯ ಸಮಸ್ಯೆಯಿಂದ ಆಸ್ಪತ್ರೆಗೆ ತೆರಳಿದ್ದ ವೇಳೆ, ಮನೆಯಲ್ಲಿ ಯಾರೂ ಇಲ್ಲದ ಸಮಯವನ್ನು ದುರುಪಯೋಗಪಡಿಸಿಕೊಂಡಿರುವ ಐವರು ಗೋಡೆ, ಕಿಟಕಿ, ಛಾವಣಿ ಶೀಟ್, ಮನೆಯ ಮುಂಭಾಗದ ತಂತಿ ಬೇಲಿ ಹಾಗು ಸಿಸಿಟಿವಿ ಕ್ಯಾಮರಾ ಹಾನಿ ಮಾಡಿದ್ದಾರೆ.

> **ಮನೆ ಧ್ವಂಸ ಪ್ರಕರಣ ತಹಶೀಲ್ದಾರ್ ಕಚೇರಿಯಲ್ಲಿದ್ದು, ಎರಡೂ ಕಡೆಯವರಿಗೆ ಸಂಬಂಧಿ ಸಿದ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿದೆ. ಸರ್ವೆ ನಂ.50ರಲ್ಲಿ ಒಟ್ಟು 105 ಎಕರೆ ಜಮೀನಿದ್ದು, ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ. -ಎಸ್.ಮಂಜು, ಕಂದಾಯ ನಿರೀಕ್ಷಕ, ಸಕಲೇಶಪುರ**

ಈ ಕುರಿತು ಪ್ರದೀಪ್ ಕುಮಾರ್ ಅವರು ಯಸಳೂರು ಪೊಲೀಸ್ ಠಾಣೆಗೆ ದೂರು ನೀಡಿ, ಮಳೆಗಾಲದಲ್ಲಿ ಸಣ್ಣ ಮಕ್ಕಳೊಂದಿಗೆ ಬೀದಿಗೆ ಬೀಳುವಂತಾಗಿದೆ. ಆರೋಪಿಗಳು ಕಾನೂನು ಬಾಹಿರವಾಗಿ ಮನೆ ಧ್ವಂಸಗೊಳಿಸಿ ಜೀವ ಬೆದರಿಕೆ ಹಾಕಿದ್ದು, ತಮ್ಮ ಕುಟುಂಬಕ್ಕೆ ನ್ಯಾಯ ಒದಗಿಸಬೇಕೆಂದು ಮನವಿ ಮಾಡಿದ್ದಾರೆ. ಘಟನೆಯ ಸಂಪೂರ್ಣ ದೃಶ್ಯ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ.

**ಆರೋಪಿಗೆ ಕ್ರಿಮಿನಲ್ ಹಿನ್ನಲೆ**

ಸಿಸಿಟಿವಿ ಕ್ಯಾಮರಾದ ದೃಶ್ಯಾವಳಿಯಲ್ಲಿ ಆರೋಪಿಗಳ ಚಹರೆ ಸ್ಪಷ್ಟವಾಗಿ ಕಂಡು ಬಂದಿದೆ. ನಿಶಾಂತ್ ಕುಮಾರ್ ಪಟ್ಲ ಬೆಟ್ಟದಲ್ಲಿ ಪ್ರವಾಸಿಗರ ಮೇಲೆ ಹಲ್ಲೆ ನಡೆಸಿದ ಪ್ರಕರಣದಲ್ಲೂ ಪ್ರಮುಖ ಆರೋಪಿಯಾಗಿದ್ದು, ಎಫ್‌ಐಆರ್ ದಾಖಲಾಗಿತ್ತು.

## ಲೋಕಕಲ್ಯಾಣಾರ್ಥ ಲಕ್ಷ್ಮೀ ನರಸಿಂಹಸ್ವಾಮಿಗೆ ಪೂಜೆ



• ಪ್ರಜೋದಯ ವರದಿ

**ಜಾವಗಲ್:** ಜಾವಗಲ್ ಶಾಲಂಕಾಯನ ಸೌಹಾರ್ದ ಬಳಗದ ವತಿಯಿಂದ ಇತಿಹಾಸ ಪ್ರಸಿದ್ಧ ಶ್ರೀಲಕ್ಷ್ಮೀ ನರಸಿಂಹಸ್ವಾಮಿ ದೇವಾಲಯದಲ್ಲಿ ಲೋಕಕಲ್ಯಾಣಾರ್ಥ 16ನೇ ವರ್ಷದ ವಿವಿಧ ಸೇವಾ ಕಾರ್ಯಕ್ರಮಗಳನ್ನು ನೆರವೇರಿಸಲಾಯಿತು.

ಮುಂಜಾನೆಯಿಂದ ಲಕ್ಷ್ಮೀ ನರಸಿಂಹಸ್ವಾಮಿಗೆ ಏಕಾದಶವಾರು ರುದ್ರಪೂರ್ವಕ ಪಂಚಾಮೃತ ಅಭಿಷೇಕ, ಅರ್ಚನೆ, ಅಲಂಕಾರ ಹಾಗು ಮಂಗಳಾರತಿ ನಡೆಯಿತು. ಬಳಿಕ ಮಹಾಗಣಪತಿ ಪೂಜೆ, ಸ್ವಸ್ತಿ ಪುಣ್ಯ ವಾಚನ, ಮಹಾಸಂಕಲ್ಪ ಹಾಗೂ ದೇವನಾಂದಿ ನೆರವೇರಿಸಲಾಯಿತು.

ಸಾಗರದ ಜೋಗ ಜೋಡಿ ಚಾಮುಂಡೇಶ್ವರಿ ದೇವಾಲಯದ ಅರ್ಚಕ ಕೃಷ್ಣಮೂರ್ತಿ ಭಟ್ ಹಾಗು ವೇದಬ್ರಹ್ಮ ಶಿವಶಂಕರ ಭಟ್ ಅವರ ಆಚಾರ್ಯತ್ವದಲ್ಲಿ ನರಸಿಂಹ ಗಾಯತ್ರಿ ಮಂತ್ರ ಪೂರ್ವಕ ಹೋಮ, ನವಗ್ರಹ, ಮಹಾಗಣಪತಿ, ಲಕ್ಷ್ಮೀ ನರಸಿಂಹ, ಮೃತ್ಯುಂಜಯ, ಚಾಮುಂಡೇಶ್ವರಿ, ಮಹಾಲಕ್ಷ್ಮೀ ಸೇರಿ ವಿವಿಧ ದೇವತಾ ಹೋಮಗಳನ್ನು ನೆರವೇರಿಸಿ ಪೂರ್ಣಾ ಹುತಿ ಸಲ್ಲಿಸಲಾಯಿತು.

ನಾಡಿನ ಒಳಿತಿಗಾಗಿ ಹಾಗೂ ಸಮೃದ್ಧ ಮಳೆ-ಬೆಳೆಗಾಗಿ ವರುಣ ದೇವರಿಗೆ ಪ್ರಾರ್ಥನೆ ಸಲ್ಲಿಸಿ, ಅನ್ನಸಂತರ್ಪಣೆ ನಡೆಸಲಾಯಿತು. ಬಳಗದ ಅಧ್ಯಕ್ಷ ಜೆ.ಎಂ.ಶಿವಸ್ವಾಮಿ, ಉಪಾಧ್ಯಕ್ಷ ಜೆ.ಹೆಚ್. ಶಿವಶಂಕರ್, ಕಾರ್ಯದರ್ಶಿ ಜೆ.ಕೆ.ಮುರುಳೀಧರ, ಪದಾಧಿಕಾರಿಗಳು ಇದ್ದರು.


## ಜೂ. 28ರಂದು ಉಂಡಿಗನಾಳು ಶಾಲೆ ಶತಮಾನೋತ್ಸವ

**ಜಾವಗಲ್:** ಜಾವಗಲ್ ಹೋಬಳಿ ಉಂಡಿಗನಾಳು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶತಮಾನೋತ್ಸವ ಹಾಗು ಗುರುವಂದನಾ ಸಮಾರಂಭ ಜೂ.28ರಂದು ಶಾಲಾ ಆವರಣದಲ್ಲಿ ನಡೆಯಲಿದೆ ಎಂದು ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಸಹ ಕಾರ್ಯದರ್ಶಿ ಉಂಡಿಗನಾಳು ಅಶೋಕ್ ಅವರು ತಿಳಿಸಿದ್ದಾರೆ.

ಶಾಲೆಗೆ ನೂರು ವರ್ಷ ಪೂರ್ಣಗೊಂಡಿರುವ ಹಿನ್ನಲೆ ಭಾನುವಾರ ಬೆಳಿಗ್ಗೆ 10ಗಂಟೆಗೆ ಸಮಾರಂಭ ಆಯೋಜಿಸಲಾಗಿದೆ. ಕೆರಗೋಡಿ ರಂಗಾಪುರದ ಶ್ರೀ ಗುರು ಪರದೇಶಿ ಕೇಂದ್ರ ಸ್ವಾಮೀಜಿ ಸಾನಿಧ್ಯದಲ್ಲಿ ಸಂಸದ ಶ್ರೇಯಸ್ ಪಟೇಲ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಹೆಚ್.ಕೆ.ಸುರೇಶ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ನಿವೃತ್ತ ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರಿಗೆ ಗುರುವಂದನೆ ಸಲ್ಲಿಸಲಾಗುವುದು. ಶಾಲೆಯ ಹಳೆಯ ವಿದ್ಯಾರ್ಥಿಗಳ ಪೈಕಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದೆಂದು ತಿಳಿಸಿದರು.

## ವಿದ್ಯಾರ್ಥಿ ಆರೋಗ್ಯ ವಿಚಾರಿಸಿದ ಶಾಸಕ



• ಪ್ರಜೋದಯ ವರದಿ

**ಹಾಸನ:** ಅಪಘಾತದಲ್ಲಿ ಗಾಯಗೊಂಡು ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಕಲೇಶಪುರ ಪಟ್ಟಣದ 10ನೇ ತರಗತಿ ವಿದ್ಯಾರ್ಥಿ ಭವಿಷ್ ಅವರನ್ನು ಶಾಸಕ ಸಿಮೆಂಟ್ ಮಂಜು ಅವರು ಭೇಟಿ ನೀಡಿ ಆರೋಗ್ಯ ವಿಚಾರಿಸಿದರು.

ವೈದ್ಯರಿಂದ ಚಿಕಿತ್ಸೆ ಕುರಿತು ಮಾಹಿತಿ ಪಡೆದು, ವಿದ್ಯಾರ್ಥಿಗೆ ಅಗತ್ಯ ವೈದ್ಯಕೀಯ ಸೌಲಭ್ಯ ಗಳನ್ನು ಸಮರ್ಪಕವಾಗಿ ಒದಗಿಸುವಂತೆ ಸೂಚಿಸಿದರು. ಬಳಿಕ ಕುಟುಂಬ ಸದಸ್ಯರಿಗೆ ಧೈರ್ಯ ತುಂಬಿ, ಭವಿಷ್ ಶೀಘ್ರ ಗುಣಮುಖರಾಗಿ ಮತ್ತೆ ವಿದ್ಯಾಭ್ಯಾಸಕ್ಕೆ ಮರಳಲಿ ಎಂದು ಹಾರೈಸಿದರು.

ಬುಧವಾರ ರಾತ್ರಿ ಬಾಳೆಗದ್ದೆ ಸಮೀಪ ರಸ್ತೆ ದಾಟುತ್ತಿದ್ದ ವೇಳೆ ವಿದ್ಯಾರ್ಥಿಯ ಅಜ್ಜ ಸಿದ್ದರಾಜು ಅವರು ಬೈಕ್ ಡಿಕ್ಕಿಯಾಗಿ ಗಾಯಗೊಂಡಿದ್ದರು. ಅದೇ ಮಾರ್ಗವಾಗಿ ತೆರಳುತ್ತಿದ್ದ ಶಾಸಕ ಸಿಮೆಂಟ್ ಮಂಜು ಅವರು ಗಾಯಾಳುವನ್ನು ತಮ್ಮ ಕಾರಿನಲ್ಲೇ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿ ಮಾನವೀಯತೆ ಮೆರೆದಿದ್ದರು. ನಂತರ ಹೆಚ್ಚಿನ ಚಿಕಿತ್ಸೆಗೆ ಸಿದ್ದರಾಜು ಅವರನ್ನು ಆ್ಯಂಬುಲೆನ್ಸ್ ಮೂಲಕ ಹಾಸನಕ್ಕೆ ಕರೆದೊಯ್ಯುವ ವೇಳೆ, ಅಜ್ಜನನ್ನು ನೋಡಲು ರಸ್ತೆ ದಾಟುತ್ತಿದ್ದ ಭವಿಷ್‌ಗೆ ಮತ್ತೊಂದು ಕಾರು ಡಿಕ್ಕಿ ಹೊಡೆದ ಪರಿಣಾಮ ಆತ ಗಂಭೀರವಾಗಿ ಗಾಯಗೊಂಡಿದ್ದ.

## ಸಂಕಷ್ಟಕ್ಕೊಳಗಾದ ಜನರ ನೆರವಿಗೆ ರೋಟರಿ

• ಪ್ರಜೋದಯ ವರದಿ




**ಹಾಸನ:** ರೋಟರಿ ಕ್ಲಬ್ ಆಫ್ ಕ್ವಾಂಟ್ ಹಾಸನದ ನೂತನ ಅಧ್ಯಕ್ಷರಾಗಿ ಹಾಸನಾಂಬ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಸಿಇಒ ಡಾ.ಬಸವರಾಜು ಅವರು ಅಧಿಕಾರ ಸ್ವೀಕರಿಸಿದರು.

ನಗರದ ನಂದಗೋಕುಲ ಕನ್ವೆನ್ಷನ್ ಹಾಲ್‌ನಲ್ಲಿ ನಡೆದ 2026–27ನೇ ಸಾಲಿನ ಪದಗ್ರಹಣ ಸಮಾರಂಭದಲ್ಲಿ ಅಧಿಕಾರ ಸ್ವೀಕರಿಸಿ ಮಾತನಾಡಿದ ಅವರು, ರೋಟರಿ ಸಂಸ್ಥೆಯು ಮನುಕುಲದ ಸೇವೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದು, ಪ್ರವಾಹ, ಯುದ್ಧ ಸೇರಿ ವಿವಿಧ ಪ್ರಕೃತಿ ವಿಕೋಪಗಳ ಸಂದರ್ಭಗಳಲ್ಲಿ ಸಂತ್ರಸ್ತರ ನೆರವಿಗೆ ಧಾವಿಸಿದೆ. ಬರಗಾಲ, ಪ್ಲೇಗ್ ಹಾಗೂ ಕೊರೊನಾ ಮೊದಲಾದ ಸಾಂಕ್ರಾಮಿಕಗಳಿಂದ ಸಂಕಷ್ಟಕ್ಕೊಳಗಾದ ಜನರ ನೆರವಿಗೆ ಶ್ರಮಿಸಿದೆ. ಭಾರತವನ್ನು ಪೋಲಿಯೋ ಮುಕ್ತ ರಾಷ್ಟ್ರವನ್ನಾಗಿಸುವಲ್ಲಿ ರೋಟರಿಯ ಕೊಡುಗೆ ಮಹತ್ವದ್ದಾಗಿದೆ ಎಂದು ಹೇಳಿದರು.

ಪದಗ್ರಹಣಾಧಿಕಾರಿಯಾಗಿ ಭಾಗವಹಿಸಿದ್ದ ಡಿಜಿಇ ರೋ.ವಸಂತ್ ಹೊಬ್ಳಿಕಾರ್ ಮಾತನಾಡಿ, ರೋಟರಿ ಕೇವಲ ಒಂದು ಸಂಘಟನೆಯಲ್ಲ, ವಿಶ್ವವ್ಯಾಪಿ ಕುಟುಂಬವಾಗಿದೆ. ಸಮಾಜದ ದೀನ ದುರ್ಬಲರು, ಆಶ್ರಯ ರಹಿತರು ಹಾಗು ಸಂಕಷ್ಟದಲ್ಲಿರುವವರ ಬದುಕಿನಲ್ಲಿ ಬದಲಾವಣೆ ತರಲು ಸದಸ್ಯರು ಕೈಜೋಡಿಸಬೇಕು. ರೋಟರಿ ಫೌಂಡೇಶನ್‌ಗೆ ಹೆಚ್ಚಿನ ದೇಣಿಗೆ ನೀಡುವ ಮೂಲಕ ಕೃಷಿ, ಆರೋಗ್ಯ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಪರಿಣಾಮಕಾರಿ ಯೋಜನೆಗಳನ್ನು ರೂಪಿಸಬೇಕೆಂದು ಸಲಹೆ ನೀಡಿದರು.

ಪಿಡಿಜಿ ಎಂ.ಕೆ.ಗೋವರ್ಧನ್ ಕುಮಾರ್ ಹಾಗು ಪಿಡಿಜಿ ರೋ. ರಮೇಶ್ ನೂತನ ಪದಾಧಿ ಕಾರಿಗಳಿಗೆ ಶುಭ ಹಾರೈಸಿದರು. ನೂತನ ಕಾರ್ಯದರ್ಶಿಯಾಗಿ ರೋ. ಯತೀಶ್, ಖಜಾಂಚಿ ಯಾಗಿ ರೋ. ಹೇಮಂತಕುಮಾರ್ ಅಧಿಕಾರ ಸ್ವೀಕರಿಸಿದರು. ಹಿರಿಯ ರೋಟೇರಿಯನ್‌ಗಳಾದ ರೋ.ಜಿತೇಂದ್ರಿ, ರೋ.ಮಂಜುನಾಥ್, ರೋ.ಅರುಣ್ ಕುಮಾರ್, ರೋ.ಹರೀಶ್ ಕುಮಾರ್, ರೋ.ರವಿ, ರೋ.ಶಿವಕುಮಾರ್, ರೋ.ವಿಶ್ವನಾಥ್, ರೋ.ಡಾ.ಸತೀಶ್, ರೋ.ಭಾರತೀಶ್ ಉಪಸ್ಥಿತರಿದ್ದರು.

## ಅರಕಲಗೂಡಿನಲ್ಲಿ ಪರಿಸರ ದಿನಾಚರಣೆ

• ಪ್ರಜೋದಯ ವರದಿ



**ಅರಕಲಗೂಡು:** ಪ್ರಕೃತಿಯ ಒಡನಾಟದಲ್ಲಿ ಬೆಳೆಯುವ ಮಕ್ಕಳು ಭವಿಷ್ಯದಲ್ಲಿ ಉನ್ನತ ಸಾಧನೆ ಮಾಡಲು ಸಾಧ್ಯ ಎಂದು ಸ್ವಸ್ಥ ಸಮಾಜ ನಿರ್ಮಾಣ ಸಮಿತಿ ಅಧ್ಯಕ್ಷ ಪ್ರದೀಪ್ ರಾಮಸ್ವಾಮಿ ಅವರು ತಿಳಿಸಿದರು.

ಪಟ್ಟಣದ ಶಾಂತಿನಿಕೇತನ ಅನುದಾನಿತ ಶಾಲೆಯಲ್ಲಿ ಬುಧವಾರ ಏರ್ಪಡಿಸಿದ್ದ ಪರಿಸರ ದಿನಾಚರಣೆಯಲ್ಲಿ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಹಿಂದೆ ಇಡೀ ಶಾಲೆಗೆ ಒಬ್ಬರೇ ಶಿಕ್ಷಕರಿದ್ದರು. ಇಂದಿನ ಪರಿಸ್ಥಿತಿ ಬದಲಾಗಿದೆ. ನಗರ ಪ್ರದೇಶದ ಮಕ್ಕಳಿಗಿಂತ ಗ್ರಾಮೀಣ ಭಾಗದ ಹಾಗೂ ಸರ್ಕಾರಿ ಶಾಲೆಯ ಮಕ್ಕಳಿಗೆ ಪ್ರಕೃತಿಯ ಪರಿಸರ ಹತ್ತಿರವಾಗಿರುತ್ತದೆ. ಅವರ ಪೋಷಕರು ಹೊಲ ಗದ್ದೆಗಳಲ್ಲಿ ಕೆಲಸ ಮಾಡುವುದನ್ನು ನೋಡಿ ಬೆಳೆ ಯುವುದರಿಂದ ಅವರಿಗೆ ಪ್ರಾಯೋಗಿಕ ಜ್ಞಾನ ಹೆಚ್ಚಿರುತ್ತದೆ. ಇದೇ ಕಾರಣಕ್ಕೆ ದೇಶದಲ್ಲಿ ಅತಿ ಹೆಚ್ಚು ಐಎಎಸ್ ಮತ್ತು ಕೆಎಎಸ್ ಅಧಿಕಾರಿಗಳು ಸರ್ಕಾರಿ ಶಾಲೆಗಳಿಂದಲೇ ಮೂಡಿಬಂದಿದ್ದಾರೆ ಎಂದರು.

ಕಳೆದ 20 ವರ್ಷಗಳ ಹಿಂದೆ ಇದ್ದ ಶಿಕ್ಷಕ ತರಬೇತಿಯ ಕ್ರೇಜ್ ಈಗ ಇಲ್ಲದಂತಾಗಿದೆ. ಪ್ರಸ್ತುತ ಕರ್ನಾಟಕ ವೊಂದರಿಂದಲೇ ಪ್ರತಿವರ್ಷ ಒಂದು ಲಕ್ಷಕ್ಕೂ ಅಧಿಕ ಇಂಜಿನೀಯರ್‌ಗಳು ಹೊರಬರುತ್ತಿದ್ದಾರೆ. ಬೆಂಗಳೂರಿನಲ್ಲೇ ನಾಲ್ಕೈದು ಲಕ್ಷ ಇಂಜಿನೀಯರಿಂಗ್ ಪದವೀಧರರಿದ್ದಾರೆ. ಚಾಟ್ ಜಿಪಿಟಿ ಮತ್ತು ಕೋಡಿಂಗ್ ತಂತ್ರಜ್ಞಾನಗಳು ಬಂದ ಮೇಲೆ ಇಂಜಿನೀಯರಿಂಗ್ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳು ಕ್ಷೀಣಿಸುತ್ತಿವೆ ಎಂದರು.

ಕ್ರೀಡೆ, ಚಿತ್ರಕಲೆ, ಯೋಗ, ಜಿಮ್ ತರಬೇತಿ ಅಥವಾ ಕೃಷಿ ಕ್ಷೇತ್ರದಲ್ಲಿ ವಿಪುಲ ಅವಕಾಶಗಳಿವೆ. ಕೇವಲ ಡಾಕ್ಟರ್, ಇಂಜಿನೀಯರ್ ಆಗುವುದಷ್ಟೇ ಸಾಧನೆಯಲ್ಲ. ಮನುಷ್ಯ ಈ ಭೂಮಿ ಕೇವಲ ತನಗಷ್ಟೇ ಸೀಮಿತ ಎಂದು ಭಾವಿಸಿ ಪರಿಸರವನ್ನು ಹಾಳು ಮಾಡುತ್ತಿದ್ದಾನೆ. ಪ್ರಾಣಿ-ಪಕ್ಷಿಗಳಿಗೂ ಭೂಮಿಯ ಮೇಲೆ ಸಮಾನ ಹಕ್ಕಿದೆ. ಕೇವಲ ವಾಣಿಜ್ಯ ಬೆಳೆಗಳಿಗೆ ಆದ್ಯತೆ ನೀಡದೆ, ಹಣ್ಣಿನ ಗಿಡಗಳನ್ನು ನೆಡಬೇಕು. ಅದರಿಂದ ಪ್ರಾಣಿ-ಪಕ್ಷಿಗಳಿಗೆ ಆಹಾರ ಸಿಗುತ್ತದೆ ಎಂದರು.

ಸ್ವಸ್ಥ ಸಮಾಜ ನಿರ್ಮಾಣ ಸಮಿತಿಯ ನಸ್ರುಲ್ಲಾ, ಬಸವರಾಜ್, ಕಾಂತರಾಜ್, ಸಂದೀಪ್, ಮೋಹನ್, ಸತೀಶ್, ಸೋಮಣ್ಣ, ದಶರಥ ಶಾಲೆಯ ಮುಖ್ಯಶಿಕ್ಷಕ ಮೊಹಮ್ಮದ್ ಫಾಯಾಜ್ ಉಪಸ್ಥಿತರಿದ್ದರು.

## ಕಸ ಎಸೆಯುವವರಿಗೆ ದಂಡದ ಎಚ್ಚರಿಕೆ



• ಪ್ರಜೋದಯ ವರದಿ

**ಅರೇಹಳ್ಳಿ:** ಪಟ್ಟಣದ ಸ್ವಚ್ಛತೆ ಕಾಪಾಡುವ ಉದ್ದೇಶದಿಂದ ಗ್ರಾಮ ಪಂಚಾಯಿತಿ ಎಲ್ಲೆಂದರಲ್ಲಿ ಕಸ ಮತ್ತು ತ್ಯಾಜ್ಯ ಎಸೆಯುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಮುಂದಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಕಸ ಹಾಕುವವರಿಗೆ 5,000 ರೂ. ವರೆಗೆ ದಂಡವಿಧಿಸಲಾಗುವುದೆಂದು ಎಚ್ಚರಿಕೆ ನೀಡುವ ಫಲಕಗಳನ್ನು ಪ್ರಮುಖ ರಸ್ತೆ ಬದಿಗಳಲ್ಲಿ ಅಳವಡಿಸಿದೆ.

ಪಟ್ಟಣದ ಲಿಂಗಾಪುರ ಗ್ರಾಮ ವ್ಯಾಪ್ತಿಯ ಸ್ಮಶಾನದ ತಿರುವಿನ ಸಮೀಪದ ರಸ್ತೆ ಬದಿಯಲ್ಲಿ ಕೆಲವರು ಮನೆ ಬಳಕೆಯ ತ್ಯಾಜ್ಯ ಹಾಗು ಮಾಂಸದ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಸುರಿಯುತ್ತಿದ್ದರು. ಅದರಿಂದ ಪರಿಸರ ಮಾಲಿನ್ಯ ಉಂಟಾಗುವುದರ ಜೊತೆಗೆ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿ, ವಾಹನ ಸಂಚಾರಕ್ಕೂ ಅಪಾಯದ ಪರಿಸ್ಥಿತಿ ನಿರ್ಮಾಣವಾಗಿತ್ತು.

ವರದಿ ಪ್ರಜೋದಯ ಪರಿಣಾಮ

ಈ ಬಗ್ಗೆ ಪತ್ರಿಕೆ ಜೂ.7ರಂದು ಅರೇಹಳ್ಳಿಯಲ್ಲಿ ಮತ್ತೆ ರಸ್ತೆ ಬದಿ ತ್ಯಾಜ್ಯದ ರಾಶಿ ಎಂಬ ಶೀರ್ಷಿಕೆಯಡಿ ವರದಿ ಪ್ರಕಟಿಸಲಾಗಿತ್ತು. ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರು ಮತ್ತು ಸದಸ್ಯರು ಆಕ್ರೋಶ ವ್ಯಕ್ತ ಪಡಿಸಿದ್ದರು. ಸುದ್ದಿ ಪ್ರಕಟವಾದ ಬಳಿಕ ಎಚ್ಚೆತ್ತ ಗ್ರಾಮ ಪಂಚಾಯಿತಿ ಅಧಿಕಾರಿಗಳು ಸ್ಥಳದಲ್ಲಿದ್ದ ತ್ಯಾಜ್ಯ ವನ್ನು ತೆರವು ಗೊಳಿಸಿದ್ದು, ಪುನಃ ಕಸ ಎಸೆಯದಂತೆ ಸಾರ್ವಜನಿಕರಿಗೆ ಎಚ್ಚರಿಕೆ ನೀಡುವ ಬ್ಯಾನರ್‌ಗಳನ್ನು ಅಳವಡಿಸಿದ್ದಾರೆ. ಸ್ವಚ್ಛತೆ ಕಾಪಾ ಡುವಲ್ಲಿ ಸಾರ್ವಜನಿಕರು ಸಹಕರಿಸ ಬೇಕು ಹಾಗು ಕಸವನ್ನು ನಿಗದಿತ ಸ್ಥಳ ಗಳಲ್ಲಿಯೇ ವಿಲೇವಾರಿ ಮಾಡ ಬೇಕೆಂದು ಅಧಿಕಾರಿಗಳು ಮನವಿ ಮಾಡಿದ್ದಾರೆ.

ಪಟ್ಟಣದ ಸ್ವಚ್ಛತೆ ಮತ್ತು ಪರಿಸರ ಸಂರಕ್ಷಣೆಗೆ ಗ್ರಾಮ ಪಂಚಾಯಿತಿ ಕೈಗೊಂಡಿರುವ ಕ್ರಮಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ.

### ಚ.ರಾ.ಪಟ್ಟಣದಲ್ಲಿ ಮಾದಕ ದ್ರವ್ಯ ವ್ಯಸನ ನಿಯಂತ್ರಣ ಕಾರ್ಯಕ್ರಮ

## ತಂಬಾಕು ಸೇವನೆ ಆರೋಗ್ಯಕ್ಕೆ ಹಾನಿಕಾರಕ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಮದ್ಯ ಸೇರಿ ಮಾದಕ ಪದಾರ್ಥ ಸೇವನೆಯಿಂದ ಆರೋಗ್ಯದ ಜೊತೆಗೆ ಪ್ರಾಣ ಹಾನಿಯಾಗುವ ಸಾಧ್ಯತೆ ಹೆಚ್ಚಿದೆ ಎಂದು ಹಿರೀಸಾವೆ ಪಿಎಸ್‌ಐ ರೂಪಾದೇವಿ ಬಿರಾದರ್ ಅವರು ಹೇಳಿದರು.

ತಾಲ್ಲೂಕಿನಹಿರೀಸಾವೆ ಗ್ರಾಮದ ಶ್ರೀಕಂಠಯ್ಯ ವೃತ್ತದಲ್ಲಿ ಹಿರೀಸಾವೆ ಪೊಲೀಸ್ ಠಾಣೆ ಹಾಗು ಪಿಎಂಶ್ರೀ ಶಾಸಕರ ಮಾದರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿಂದ ನಡೆದ ಮಾದಕ ದ್ರವ್ಯ ವ್ಯಸನ ನಿಯಂತ್ರಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಂಬಾಕು ಸೇವನೆ ಆರೋಗ್ಯಕ್ಕೆ ಹಾನಿಕಾರಕ ಎಂದರು.

ಧೂಮಪಾನದಿಂದ ಮಾರಕವಾದ ಕ್ಯಾನ್ಸರ್ ಸೇರಿ ಶ್ವಾಸಕೋಶಕ್ಕೆ ಸಂಬಂಧಪಟ್ಟಂತೆ ವಿವಿಧ ಖಾಯಿಲೆಗಳಿಗೆ ತುತ್ತಾಗಲಿದ್ದು ಮದ್ಯ ಸೇವನೆಯಿಂದ ಹಣ ಕಳೆದುಕೊಳ್ಳುವುದರ ಜೊತೆಗೆ ನಂಬಿರುವವರ ಬದುಕು ಬೀದಿಗೆ ಬರಲಿದೆ. ಅದರಿಂದ ಗೌರವಕ್ಕೂ ಧಕ್ಕೆಯಾಗಲಿದೆಯೆಂದು ತಿಳಿಸಿದರು.

ಪಾಲಕರ ನಡೆ-ನುಡಿ ಹಾಗು ದೈನಂದಿನ ಬದುಕುಮಕ್ಕಳ ಭವಿಷ್ಯಕ್ಕೆ ಮಾದರಿಯಾಗ ಬೇಕು. ಮನೆಯ ವಾತಾವರಣವು ಮಕ್ಕಳಲ್ಲಿ ಸಂಸ್ಕಾರ ಕಲಿಸುತ್ತದೆ. ಪಾಲಕರು ಮಕ್ಕಳ ಮುಂದೆ ಅನುಚಿತವಾಗಿ ವರ್ತಿಸಬಾರದು. ಪಾಲಕರ ಮಾತು-ಮಾರ್ಗವು ಮಕ್ಕಳಲ್ಲಿ ಮತ್ತಷ್ಟು ಸಂಸ್ಕಾರ ಹೆಚ್ಚಿಸಲಿದೆ. ಅದರಿಂದ ಉತ್ತಮ ಸಮಾಜ ನಿರ್ಮಾಣವಾಗಲಿದೆ ಎಂದು ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು.

ಶಾಲಾ-ಕಾಲೇಜು, ದೇವಾಲಯ ಹಾಗು ಪ್ರಾರ್ಥನಾ ಮಂದಿರಗಳ ಬಳಿ ಮದ್ಯ ಮತ್ತು ತಂಬಾಕು ಉತ್ಪನ್ನಗಳ ಮಾರಾಟ ಅಕ್ಷಮ್ಯ ಅಪರಾಧವಾಗಲಿದೆ. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಹಾಗು ಮದ್ಯಪಾನ ಮಾಡುವುದು ಕಂಡುಬಂದರೆ ಅಂತಹವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದೆಂದು ಎಚ್ಚರಿಸಿದರು.

**ಜಾಗೃತಿ ಜಾಥಾ:** ಮಾದಕ ದ್ರವ್ಯ ವ್ಯಸನ ನಿಯಂತ್ರಣ ಅಭಿಯಾನದಡಿ ಪಿಎಂಶ್ರೀ ಶಾಸಕರ ಮಾದರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಿಂದ ಪ್ರಾರಂಭವಾದ ಜಾಗೃತಿ ಜಾಥಾ ಹಳೆ ಬಿಎಂ ರಸ್ತೆ ಮಾರ್ಗವಾಗಿ ಶ್ರೀಕಂಠಯ್ಯ ವೃತ್ತ ತಲುಪಿತು. ವಿದ್ಯಾರ್ಥಿಗಳು ಮದ್ಯಪಾನ ಮತ್ತು ಧೂಮಪಾನದಿಂದಾಗುವ ದುಷ್ಪರಿಣಾಮಗಳ ಕುರಿತು ಚುಟುಕು ನಾಟಕ ಪ್ರದರ್ಶಿಸಿ ಅರಿವು ಮೂಡಿಸಿದರು.

ಮುಖ್ಯಶಿಕ್ಷಕಿ ಹೆಚ್.ಬಿ.ಉಮಾ, ಶಿಕ್ಷಕರಾದ ಎಲ್.ಎಸ್.ಧರ್ಮೇಶ್, ಯೋಗೇಶ್, ವಿನಯ ಎಂ.ಗುನಗ, ಗೌರಮ್ಮ, ಶೋಭ, ದೇವಕಿ, ಶ್ವೇತ, ಲಕ್ಷ್ಮಿ, ರಕ್ಷಿತಾ ಹಾಗು ಪೊಲೀಸ್ ಸಿಬ್ಬಂದಿ ಇದ್ದರು.

## ಇಂದು ಬಸವೇಶ್ವರ ದೇವಾಲಯ ಲೋಕಾರ್ಪಣೆ

• ಪ್ರಜೋದಯ ವರದಿ



**ಹಾಸನ:** ತಾಲ್ಲೂಕಿನ ಶಾಂತಿಗ್ರಾಮ ಹೋಬಳಿ ಜಾಗರವಳ್ಳಿ ಗ್ರಾಮದಲ್ಲಿ ನಿರ್ಮಿಸಿರುವ ಶ್ರೀ ಬಸವೇಶ್ವರ ದೇವಾಲಯ ಲೋಕಾರ್ಪಣೆ ಹಾಗು ಬ್ರಹ್ಮಕಲಶೋತ್ಸವ ಜೂ.26ರ ಶುಕ್ರವಾರ ನೆರವೇರಲಿದೆ.

ಬೆಳಿಗ್ಗೆ 6 ರಿಂದಲೇ ಪೂಜಾ ವಿಧಿ ವಿಧಾನ ನಡೆಯಲಿದ್ದು, ವಿಗ್ರಹ ಪ್ರತಿಷ್ಠಾಪನೆ ಬಳಿಕ ಅನ್ನ ಸಂತರ್ಪಣೆ ನಡೆಯಲಿದೆ. 500 ವರ್ಷಗಳ ಇತಿಹಾಸ ಹೊಂದಿರುವ ಈ ದೇವಾಲಯ ಕಾಲ ಕಳೆದಂತೆ ಅಳಿವಿನಂಚಿಗೆ ತಲುಪಿತ್ತು. ವಿಶ್ವಕರ್ಮ ಸಮುದಾಯದ 60 ರಿಂದ 100 ಕುಟುಂಬಗಳ ಆರಾಧ್ಯ ದೈವವಾಗಿರುವ ಬಸವೇಶ್ವರ ದೇಗುಲಕ್ಕೆ ಪುನರುಜ್ಜೀವನ ಕಲ್ಪಿಸುವ ಕಾರ್ಯ 2024 ರಿಂದ ಪ್ರಾರಂಭವಾಗಿತ್ತು. ಈಗ ದೇವಾಲಯ ಕಟ್ಟಡ ಕೆಲಸ ಪೂರ್ಣಗೊಂಡಿದ್ದು ಶುಕ್ರವಾರ ಲೋಕಾರ್ಪಣೆ ನೆರವೇರಲಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK